doc-194
T.P-8

ಪ್ರಬೋಧ ವಿಶೇಷಾಂಕದೊಡನೆ — ಬೆಲೆ ಒಂದು ಆಣೆ

Regd No M 1299 34 th Year ತಾ|| 22—5—51

SATYAVADI

ಸತ್ಯವಾದಿ

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎ. ವಿ. ಸುಬ್ರಾಯರು [ಬಿಡಿ ಪ್ರತಿ] ಆ

ನೂತನ ಪಕ್ಷವನ್ನು ಸಿಡಿಸಲು ಕಾಂಗ್ರೆಸ್ಸು ಯತ್ನಿಸುವುದೇ ?

ಪೌರಸಭೆ

ಮೈಸೂರು ಪೌರಸಭೆಯ ಸಾಧಾರಣ ಅಧಿವೇಶನ ಇದೇ ತಾ|| 29 ರ ಮಧ್ಯಾಹ್ನ 4 ಗಂಟೆಗೆ ಸಮಾವೇಶವಾಗುತ್ತದೆ.

ಮೈಸೂರು ಟೌನ್‌ಹಾಲ್‌ನಲ್ಲಿ ಈವಿನಿಂಗ್ ಬಜಾರ್ ನಿರ್ಮಿಸುವ ಕುರಿತು ಶ್ರೀ ಬಿ. ಡಿ ದಾಸ್‌ರವರು ನಿರ್ಣಯ ಕಳಿಸಿದ್ದಾರೆ

ಚಾಮುಂಡಿ ಬಡಾವಣೆ ವ್ಯಾಯಾಮ ಶಾಲೆ ಬಳಿ ರೇಡಿಯೋ ಬೂತ್ ನಿರ್ಮಾಣವಾಗಬೇಕೆಂದು ಕುರಿತು ಶ್ರೀ ಎ ಕೃಷ್ಣಪ್ಪಾತಿಗಾವ್‌ರವರು ನಿರ್ಣಯ ಕಳಿಸಿದ್ದಾರೆ.

ಪ್ರತಿನಿತ್ಯ ಉಪಯೋಗಿಸುವ ಜೀವನಕ್ಕೆ ಅಗತ್ಯವಾದ ವಸ್ತುಗಳೆಲ್ಲವುಗಳೆಲ್ಲವುಗಳ ಮೇಲೆ ನಿಯಂತ್ರಣ ವಿಧಿಸುವ ಏನಹ ಅವುಗಳ ಬೆಲೆ ಕಡಿವೆ ಯಾಗುವುದಿಲ್ಲವೆಂದು ಜೊಂಬ್ರಾಯಿಸ ಸಂಬರಾಜು ಶಾಖೆ ಸಚಿವ ಶ್ರೀ ದಿನಕರರಾವ್ ದೇಸಾಯಿ ಅಹಮದಾಬಾದಿನಲ್ಲಿ ತಿಳಿಸಿರುವರು.

ಭಾರತದ ವಾಣಿಜ್ಯ ವಸ್ತು ಕೈಗಾರಿಕಾ ಸಂಸ್ಥೆಯವರು ಪ್ರೊ|| ನೆಹರೂರವರಿಗೆ ಪತ್ರ ಬರೆದು ಭಾರತದ ರಾಜ್ಯಾಂಗ ಘಟನೆಯನ್ನು ಈಗೇನೂ ತಿದ್ದುವ ಶಕ್ಯ ಕಂಡುಬರುವದಿಲ್ಲವೆಂದು ತಿಳಿಸಿದೆ

ಪಾನ ಪ್ರತಿಬಂಧ ಬಗೆಗೆ ಸಿಲೋನ್ ತೀವ್ರಾಕ್ಷತವಾಗಿದೆ. ಭಾರತ ಸರಕಾರವನ್ನು ಆ ಸರ್ಕಾರ ಪಾನಪ್ರತಿಬಂಧ ಬಗೆಗೆ ವಿವರ ಕೇಳಿದೆ.

ಅಮೇರಿಕದ ವಿದೇಶ ಕಾರ್ಯದರ್ಶಿ ಡೀನ್ ಅಚೇಸನ್‌ರವರು ರದ್ದು ಮಾಡಲ್ಪಡಬೇಕೆಂದು 43 ಮಂದಿ ರಿಪಬ್ಲಿಕ್ ಸದಸ್ಯರು ಒತ್ತಾಯ ಮಾಡಿದ್ದಾರೆ.

ಧರ್ಮಾಜ್ ಹಳ್ಳಿಯಿಂದ ಬಿಹಾರಿಗೆ 2 ಸಾವಿರ ವಣ ಧಾನ್ಯ ಹೋಗಿದೆ ಈ ಹಳ್ಳಿ ಅಹಮದಾಬಾದಿಗೆ ಐವತ್ತು ಮೈಲು ದೂರದಲ್ಲಿದೆ. ಅಲ್ಲಿನ ಮಂದಿ ತಮ್ಮ 1 ತಿಂಗಳ ಈ ಆಹಾರವನ್ನು ವಿ. ಗಿಸಿ ಕಳಿಸಿದ್ದಾರೆ.

ಭಾರತ ಕಾಂಗ್ರೆಸಿನ ವಿದೇಶ ಶಾಖೆಯ ಕಾರ್ಯದರ್ಶಿ ಶ್ರೀ ಎಸ್. ವಿ. ರಾಜಕ.ಮಾಡರು ಬೊಂಬಾಯಿನಲ್ಲಿ ಹೇಳಿಕೆ ಹೊರಡಿಸಿ ಗೋವವನ್ನು ಸ್ವತಂತ್ರ ಮಾಡಲು ಸಂಯುಕ್ತ ರಂಗರಚನೆ ಮಾಡಬೇಕೆಂದು ತಿಳಿಸಿರುವರು.

ದಕ್ಷಿಣ ಭಾರತ ಪ್ರವಾಸವನ್ನು ತೀರಿಸಿ ದೆಹಲಿಗೆ ಮರಳಿದ ಆಚಾರ್ಯ ಕೃಪಲಾನಿ ಹೇಳಿಕೆ ಇತ್ತು ರಾಷ್ಟ್ರದ ಎಲ್ಲ ಕಡೆಗಳಲ್ಲಿಯೂ ಕಾಂಗ್ರೆಸೀ ಆಡಳಿತ ಬಗೆಗೆ ಜನ ಬೇಸತ್ತಿರುವರು ಎಂದಿರುವರು.

ಕಾಶ್ಮೀರ ರಾಷ್ಟ್ರೀಯ ಜನರಲ್ ಕೌನ್ಸಿಲ್ ಅಧ್ಯಕ್ಷ ಮಹಮದ್ ಸಹೀದ್ ರವರು ದೆಹಲಿಯಲ್ಲಿ ಹೇಳಿಕೆಯಿತ್ತು ಫ್ರಾಂಕ್ ಗ್ರಹಾಂರವರನ್ನು ಕಾಶ್ಮೀರ ಮಧ್ಯಸ್ಥಿಕೆಗಾರರನ್ನಾಗಿ ನೇಮಕ ಮಾಡಿರುವದು ಪ್ರಜಾಪ್ರಭುತ್ವಕ್ಕೆ ಅಗಿರುವ ಭಾರಿ ಪೆಟ್ಟು ಎಂದಿರುವರು.

ವಾರ್ತೆಗಳು

ಅಖಿಲ ಭಾರತ ಕಾಂಗ್ರೆಸ ಸಮಿತಿ ಅಧಿವೇಶನ ವಿಶೇಷವಾಗಿ ಜುಲೈ ತಿಂಗಳಿನಲ್ಲಿ ಸಮಾವೇಶವಾಗುವ ಸಂಭವವಿದೆ ಕಾಂಗ್ರೆಸಿನ ವಿಶೇಷ ಸಭೆ ಕುರಿತು ಆಚಾರ್ಯ ಕೃಪಲಾನಿಗೆ ತಮ್ಮ ಪ್ರತಿಕ್ರಿಯೆಯನ್ನು ತಿಳಿಸುತ್ತಾ, ನೂತನ ಪಕ್ಷ ಸಿಡಿಸಲು ಈ ರೀತಿಯ ಪ್ರಯತ್ನ ಎಂದಿರುವರು – ಹೀಗೆಂದು ದೆಹಲಿ ವಾರ್ತೆ.

ಪಾಕಿಸ್ತಾನದ ಖುರ್ತೂಜ್ ಎಂಬ ಪತ್ರಿಕೆ ಪಾಕಿಸ್ತಾನದಲ್ಲಿ ಈಚಿಗೆ ನಡೆದ ಪಿಕೂರಿ ಕುರಿತು ಅಫ್ಘಾನಿಸ್ತಾನದಲ್ಲಿನ ಭಾರತ ರಾಯಭಾರಿ ಸಹಾ ಈ ಪಿಕೂರಿಯಲ್ಲಿ ಕೈಹಾಕಿದ್ದರು ಎಂದು ಮಾಡಿದ ವರದಿ ಬಗೆಗೆ ಭಾರತ ಸರ್ಕಾರ ಅಲ್ಲಿನ ಸರ್ಕಾರಕ್ಕೆ ತೀವ್ರ ಪ್ರತಿಭಟನೆ ಮಾಡಿದೆಯೆಂದು ದೆಹಲಿ ವಾರ್ತೆ.

ಬೆಂಗಳೂರು ಕಬ್ಬನ್‌ಪಾರ್ಕಿನಲ್ಲಿ ನಡೆದಂತಾ ವಸ್ತುಪ್ರದರ್ಶನ ಇನ್ನು ಮುಂದೆ ಸಡೆಯಬಾರದೆಂದು ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಎಸ್. ನಿಜಲಿಂಗಪ್ಪನವರು ಬೆಂಗಳೂರಿನಲ್ಲಿ ತಿಳಿಸಿದ್ದಾರೆ.

ಮಹಾ ಚುನಾವಣೆಗೆ ವರ್ಷವೇ ಭಾಷಾವಾರು ವ್ಯಾಂತ್ಯ ಪ್ರಶ್ನೆ ನಿರ್ದಿಷ್ಟ ಆಕಾರ ಪಡೆಯುವ ಸಂಭವವಿದೆಯೆಂದು ಶ್ರೀ ಎಸ್. ನಿಜಲಿಂಗಪ್ಪನವರು ಬೆಂಗಳೂರಿನಲ್ಲಿ ತಿಳಿಸಿರುವರು.

ಕೊರಿಯಾ ಶಾಂತಿ ವದೂತಿಯಿಂದ ಬೊಂಬಾಯಿ ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ನಿನ್ನೆ ಬೆಲೆಗಳು ಕಡಿಮೆ ಇಳಿದಿದ್ದವು.

ಭಾರತದಲ್ಲಿ ಬುದ್ಧಿ ಕೆಟ್ಟವರ ಸೈಕಿಪ ಹಿಳೆಯರ ಸಂಖ್ಯೆ ಅಧಿಕವಾಗಿದೆಯೆಂದು ದೆಹಲಿ ವಾರ್ತೆ. ಆಸ್ಪತ್ರೆಗಳಲ್ಲಿರಬೇಕಾದ ½ ಲಕ್ಷ ಮಂದಿಗೆ ವಿಾರಿದ ಜನ ಬೀದಿಯಲ್ಲಿ ಓಡಾಡುತ್ತಿರುವ ವರದಿ

ಭಾರತದ 18 ಕೋಟಿ ಮತದಾರರು 3970 ಮಂದಿಯನ್ನು ಆರಿಸಬೇಕಾಗಿದೆಯೆಂದು ದಿಲ್ಲಿ ವಾರ್ತೆ.

55 ವರ್ಷದ ರಾಮರಾವ್ ಚೌಬೆ ಎಂಬ ಪ್ರೊಫೆಸರು 15 ನೇ ಎಂ. ಎ. ಪದವಿ ಪಡೆದರೆಂದು ಕಾಶಿ ವಾರ್ತೆ.

ಸ್ಥಾನಬದ್ಧತೆಯಲ್ಲಿಂತಕ್ಕಂತಹ ವ್ಯಕ್ತಿಗೂ ಸಹಾ ಮಹಾಚುನಾವಣೆಯಲ್ಲಿ ಮತದಾನ ಮಾಡಲು ಸೌಕರ್ಯ ಕಲ್ಪಿಸುವದಾಗಿ ಅಂಬೇಡ್ಕರರು ದೆಹಲಿಯಲ್ಲಿ ತಿಳಿಸಿರುವರು.

ವಿಶಪ್ರಾಶನ ಮೊಕದ್ದಮೆ

ತಮ್ಮ ವಿರುದ್ಧ ಇರುವ ಕ್ರಿಮಿನಲ್ ಕೇಸಿನಿಂದ ತಪ್ಪಿಸಿಕೊಳ್ಳಲು ಕ್ರಿಮಿನಲ್ ಪ್ರೊಸಿಜರ್ ಕೋಡನ್ನು ತಿದ್ದುಪಡಿ ಮಾಡಿಸಲು ಮಂತ್ರಿ ಶ್ರೀ ಮೇದಪ್ಪನವರಿಗೆ ಅವಮಾನ ಪಡಿಸಲು ಭಾರತ ಪಾರ್ಲಿಮೆಂಟಿನ ಉಪಾಧ್ಯಕ್ಷರಾದ ಶ್ರೀ ಅನಂತಶಯನ್‌ರವರು ಅಯ್ಯಂಗಾರ್ಯರ ಇತ್ತೀಚಿನ ಯುನ್ಸಸ್ಸನ್ನು ಉಪಯೋಗಿಸಿಕೊಳ್ಳುವದಾಗಿ ಶ್ರೀ ಎಲ್. ಎಸ್ ರಾಜು ತಿಳಿಸಿದರೆಂದು ವಿಶಪ್ರಾಶನ ಮೊಕದ್ದಮೆಯಲ್ಲಿ ಬೆಂಗಳೂರು ಸಿವಿಲ್ ಸ್ಟೇಷನ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರ ಮುಂದೆ ನೆನ್ನೆ ಸಾಕ್ಷ್ಯ ನೀಡುತ್ತಾ ಶ್ರೀ ಡಿ. ಕೆ. ವರಾರ್ತಿಯವರು ತಿಳಿಸಿದರು

ತೆಲಗಾಣ ಬಡವರಿಗೆ ಭೂಮಿ

ಕಮ್ಯುನಿಸ್ಟ್ ಆಡಾಳಿತಕ್ಕೆ ಸಿಕ್ಕಿದ ತೆಲುಗಾಣ್ಯದಲ್ಲಿ ಆಚಾರ್ಯ ವಿನೋಬ ಭಾವೆ ಕಳೆದ 35 ದಿವಸಗಳಿಂದ ಕಾಲ್ನಡಿಗೆ ಪ್ರವಾಸ ಮಾಡುತ್ತಿರುವುದೆಲ್ಲಿ ಅಲ್ಲಿನ ಬಡವರಿಗೆ ಹಂಚಲು ಅಲ್ಲಿನ ಜನರು ಆಚಾರ್ಯ ವಿನೋಬಭಾವೆಯವರಿಗೆ 3 ವರ ಸಹಸ್ರ ಎಕರೆ ಭೂಮಿ ಕೊಡಲು ಮುಂದೆ ಬಂದಿರುವರು.

ವ್ಯಾಪ್ತಿ ಇಲ್ಲ

ತನ್ನನ್ನು ವರ್ಗ ಇನ್ನೊಬ್ಬ ಅಪರಾಧಿಯನ್ನು ವಿಚಾರಣೆ ಮಾಡುತ್ತಿರುವ ವಿಶೇಷ ನ್ಯಾಯಾಧೀಶರಿಗೆ ಮೊಕದ್ದಮೆ ನಡಸಲು ವ್ಯಾಪ್ತಿ ಇಲ್ಲವೆಂದು ಕಾಸಿಂ ರಜವಿ ತಿಳಿಸಿರುವದಾಗಿ ಹೈದರಾಬಾದ್ ವಾರ್ತೆ.

ಬದಲಾವಣೆ ಇಲ್ಲ

ಬಟ್ಟೆ ಹಂಚಿಕೆ ಸಂಬಂಧಾಜಿನಲ್ಲಿ ಯಾವ ಬದಲಾವಣೆಯೂ ಇಲ್ಲವೆಂದು ದೆಹಲಿ ವಾರ್ತೆ.

ದಿವ್ಯವಾಣಿ

ಉದ್ಯೋಗಶೀಲನಾದ ಮನುಷ್ಯನು ದೈವಾನುಗ್ರಹಕ್ಕೆ ಪಾತ್ರನಾಗಿ ಉತ್ತಮ ಸ್ಥಿತಿಯನ್ನು ಹೊಂದುತ್ತಾನೆ. ಆದರೆ ಉದ್ಯೋಗಿಯಾದ (ಸೋಮಾರಿ) ಕರ್ಮ ಭ್ರಷ್ಟನು ಗಾಯದ ಮೇಲೆ ಉಪ್ಪುನೀರನ್ನೆರಚಿದಂತೆ ಪುನಃ ಪುನಃ ದುಃಖವನ್ನನುಭವಿಸುತ್ತಾನೆ

ಭಾರತದ ಅಧ್ಯಕ್ಷರು ಬರೋಡಾದ ಮಾಜಿ ದೊರೆಗಳಾದ ಸರ್ ಪ್ರತಾಪಸಿಂಗ್ ಗಾಯಕವಾಡರ ಮೇಲೆ ಕ್ರಮ ಕೈಗೊಂಡದ್ದನ್ನು ಮತ್ತೆ ಬದಲಾಯಿಸುವದಿಲ್ಲವೆಂದು ಅವರಿಗೆ ತಿಳಿಸಲಾಗಿದೆ.

Announcement

Theatre building old materials and furniture are being sold very cheap.

Apply to—

NEW OPERA TALKIES

MYSORE

ಸಿನೆಮಾ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ.

ವಿವರಗಳಿಗೆ—

ನ್ಯೂ ಅಪೇರಾ ಟಾಕೀಸ್

ಮೈಸೂರು

ಸೂಚನೆ — ಕಾನ್ಪುರದಲ್ಲಿ ನಡೆದ ಧರ್ಮಸಂಘಾಧಿವೇಶನದ ಸತ್ಯವಾದಿ – ಪ್ರಬೋಧ ವಿಶೇಷ ಸಂಚಿಕೆಯನ್ನು ಪ್ರಕಟಿಸಲಾಗಿದೆ. ಈ ಬಗ್ಗೆ ಶ್ರಮಿಸಿದ ಕೆಲಸಗಾರರಿಗೆ ನಾಳೆ ಬಿಡುವು ಇರುವುದರಿಂದ ಪತ್ರಿಕೆ ಪ್ರಕಟವಾಗುವದಿಲ್ಲ.

ಸತ್ಯವಾದಿ ಸೋಮವಾರ ಸಂಚಿಕೆ

ಶ್ರೀ ದ್ವಾರಕಾ ಜಗದ್ಗುರುಗಳವರ ಉದಾರಾಶ್ರಯದಲ್ಲಿ ಪ್ರಕಟವಾಗುವ

– ಪ್ರಬೋಧ –

ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ

ವಾರ್ಷಿಕ ಚಂದಾ

ಅಂಚೆವೆಚ್ಚ ಸಮೇತ 1–14–0

ರಣಜಿತ್ ಆಕರ್ಷಣೀಯ 2 ನೇ ವಾರ

ನೊದಲಿನಿಂದ ಕಡೆವರೆಗೂ ಹೊಟ್ಟೆ ಹುಣ್ಣಾಗುವಷ್ಟು ನಗಿಸುವ ಚಿತ್ರ

SAGAI ನಗಾಯಿ

ರೆಹನಾ, ಯಾಕೂಬ್, ಪ್ರೇಮನಾಥ್, ಗೋಪ್ ಪಾತ್ರವಹಿಸಿರುವ ಸಂಗೀತ, ನೃತ್ಯ, ಹಾಸ್ಯಲಹರಿಯಿಂದ ಕೂಡಿದ ಅಪೂರ್ವ ಹಿಂದೀ ವಾಕ್ಚಿತ್ರ

ಪ್ರತಿ ದಿನ 3 ಆಟಗಳು

ಉಡ್‌ಲಾಂಡ್ 18–5–51 ರಿಂದ

ಶಿ ನ

ನಿರೂಪರಾಯ್, ತ್ರಿಲೋಕಕಪೂರ್

ರಾಂಸಿಂಗ್, ದುರ್ಗಾಖೋಟಿ

ಪಾತ್ರವಹಿಸಿರುವ ಅತ್ಯದ್ಭುತ, ಆಕರ್ಷಣೀಯ, ಮನಮೋಹನ

ಚಿತ್ರರತ್ನ (ಹಿಂದಿ)

ಬೀಮಸೇನ್

BHIMSEN

ಪ್ರತಿ ದಿನ 3 ಪ್ರದರ್ಶನಗಳು

SHAKTI SUDHA

A Superb Tonic

ಶಕ್ತಿಸುಧಾ

— ಉತ್ತಮವಾದ ಟಾನಿಕ್ —

For Quality Printing

L. N. Press

Sivarampet, Mysore

ಐ. ಟಿ. ಎಲ್. ಗ್ಲೈಪ್ ಸಿರಪ್

ನಿಮ್ಮ ಮುದ್ದು ಕಂದನ ಅಜೀರ್ಣ ವ್ಯಾಧಿಗಳನ್ನು ತಡೆದು ಆರೋಗ್ಯ ಕಾಪಾಡುವ ಅಮೃತವಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ ಲಿಮಿಟೆಡ್

ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ITL ಗ್ಲೈಪ್ ಸಿರಪ್

ಪಂಚದ ಒಂದು ಸ್ವತಂತ್ರ ರಾಜ್ಯವಾದ ಗ್ರೀಸಿನ 130 ನೇ ಸ್ವಾತಂತ್ರ್ಯ ಜನ್ಮೋತ್ಸವವು ಈಜೆಗೆ ವೈಭವದಿಂದ ನೆರವೇರಿತು

೧೫ ಉಪಸಂಹಾರ— ಎಸ್ಟು ಧರ್ಮರಕ್ಷಕರಾದ ಶ್ರೀ ದ್ವಾರಕಾಧೀಶರೂ ಶ್ರೀ ಚಂದ್ರಮೌಳೀಶ್ವರರೂ ಸಮಸ್ತ ಜನತೆಗೆ ಧರ್ಮಬುದ್ಧಿಯನ್ನೂ ಸಮಸ್ತ ಶ್ರೇಯಸ್ಸನ್ನೂ ಪ್ರದಾನಮಾಡಿ ರಕ್ಷಿಸಲೆಂದು ನಮ್ಮ ಆಶೀರ್ವಾದ.

ಸರ್ವೇಽತ್ರ ಸುಖಿನಸ್ಸನ್ತು ಸರ್ವೇ ಸನ್ತು ನಿರಾಮಯಾಃ ।
ಸರ್ವೇ ಭದ್ರಾಣಿ ಪಶ್ಯನ್ತು ಮಾ ಕಶ್ಚಿದ್ದುಃಖಮಾಪ್ನುಯಾತ್ ॥

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ ಲೋಕಾಸ್ಸಮಸ್ತಾಸ್ಸುಖಿನೋಭವನ್ತು ॥

ಧರ್ಮಸ್ಯ ವಿಜಯೋ ಭೂಯಾದ್
ಅಧರ್ಮಸ್ಯ ಕ್ಷಯೋ ಭವೇತ್
ಸದ್ಭಾವನಾ ಪ್ರಾಣಭೃತಾಂ
ಭೂಯಾದ್ವಿಶ್ವಸ್ಯ ಮಙ್ಗಲಮ್ ॥

॥ ಶ್ರೀ ॥

ಅಖಿಲ ಭಾರತ ಧರ್ಮಸಂಘಾಧಿವೇಶನ

ಅಖಿಲ ಭಾರತ ರಾಮರಾಜ್ಯಪರಿಷದಧಿವೇಶನ

ಅಖಿಲ ಭಾರತ ಮಹಿಳಾಸಂಘಾಧಿವೇಶನ

ಅಖಿಲ ಭಾರತ ಗೋರಕ್ಷಾ ಸಮ್ಮೇಳನ

ಅಖಿಲ ಭಾರತ ಧರ್ಮವೀರದಳ ಸಮ್ಮೇಳನ

ಸಾಂಸ್ಕೃತಿಕ ಕವಿತಾ ಸಮ್ಮೇಳನ

.... ಕಾ ನ ಪು ರ ....

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀಮಜ್ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ದ್ವಾರಕಾಪೀಠಾಧೀಶ್ವರ ಶ್ರೀ ಅಭಿನವ ಸಚ್ಚಿದಾನಂದ ತೀರ್ಥ ಸ್ವಾಮಿಗಳವರ ಅಧ್ಯಕ್ಷತೆ ಮತ್ತು ಆಶ್ರಯದಲ್ಲಿ ಕಳೆದ ಚೈತ್ರ ಶುದ್ಧ ತ್ರಯೋದಶೀ ಶಕ್ರವಾರದಿಂದ ಚೈತ್ರ ಬಹುಳ ತದಿಗೆ ಮಂಗಳವಾರದವರೆಗೆ (ತಾ॥ 20–4–51 ರಿಂದ 24–4–51 ರವರೆಗೆ) ಕಾನಪುರನಗರದಲ್ಲಿ ಮೇಳ್ಕಂಡ ಸಮ್ಮೇಳನಗಳು ವೈಭವದಿಂದ ಜರುಗಿದವು.

ಕಾನಪುರವು ಉತ್ತರ ಹಿಂದೂಸ್ಥಾನದ ಪ್ರಸಿದ್ಧ ನಗರಿಯಾಗಿದೆ. ಧಾರ್ಮಿಕ ದೃಷ್ಟಿಯಿಂದಲೂ ಇದಕ್ಕೆ ಮಹತ್ವವಿದೆ ; ಗಂಗೆ – ಯಮುನೆಗಳ ನಡುವಿನ ಪ್ರದೇಶವು ಬಹು ಪವಿತ್ರವಾದುದೆಂದೂ, ಇದಕ್ಕೇ ಹೆಸರು ಆರ್ಯಾವರ್ತ ಅಥವಾ ಬ್ರಹ್ಮಾವರ್ತ ಕ್ಷೇತ್ರವೆಂದೂ ಶಾಸ್ತ್ರಗಳು ಸಾರಿವೆ. ಇಲ್ಲಿ ಸಾವಿರ - ಲಕ್ಷ ಗಟ್ಟಲೆ ರಾಜಸೂಯ, ಅಶ್ವಮೇಧಾದಿ ಯಜ್ಞಗಳಾಗಿ ಈ ದೇಶದ ಚಿಂದೊಂದು ರಜಃಕಣವೂ ಪರಮ ಪವಿತ್ರವೆನಿಸಿದೆ.

ಈ ಸಮ್ಮೇಳನಗಳ ನಿರ್ವಿಘ್ನತೆಗಾಗಿ ರುದ್ರಯಾಗವೂ ಜತೆಗೆ ನಡೆಯಿತು.

ಅಖಿಲ ಭಾರತವರ್ಷೀಯ ಧರ್ಮಸಂಘದ ಹತ್ತನೇ ಅಧಿವೇಶನದ ಅಧ್ಯಕ್ಷತೆ ವಹಿಸಲು ಶ್ರೀ ಶ್ರೀ ಕರಪಾತ್ರಿಗಳವರು ಸಾಗ್ರಹ ಪ್ರಾರ್ಥನೆ ಮಾಡಿದ್ದರಿಂದ ಶ್ರೀಮಜ್ಜಗದ್ಗುರು ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರು ಗುಜರಾತಿನಿಂದ ಹೊಂಟು, ದಿಲ್ಲೀಗೆ ಹೋಗಿ, ಅಲ್ಲಿಂದ ಹರಿದ್ವಾರದ ಋಷಿಕುಲ ಬ್ರಹ್ಮಚರ್ಯಾಶ್ರಮ – ವಿಶ್ವವಿದ್ಯಾಲಯದ ವಾರ್ಷಿಕೋತ್ಸವಕ್ಕಾಗಿ ಅಧಿಕಾರಿಗಳೂ ಪ್ರಾರ್ಥಿಸಿದ್ದರಿಂದ ರಾಮನವಮಿ ದಿನ ಹರಿದ್ವಾರಕ್ಕೆ ಚಿತ್ತೈಸಿ, ಅಲ್ಲಿ ಪವಿತ್ರ ಗಂಗಾಸ್ನಾನವನ್ನು ಮಾಡಿ, ಉತ್ಸವಾನಂತರ ಋಷಿಕೇಶಕ್ಕೂ ಹೋಗಿ, ಬಳಿಕ ಕಾನಪುರಕ್ಕೆ ಆಗಮಿಸಿದರು. ಕಾನಪುರದ ಜನರು ಉತ್ಸಾಹದಿಂದಲೂ ವೈಭವದಿಂದಲೂ ಸ್ವಾಗತಿಸಿದರು. ನಗರದ ಮುಖ್ಯ ಬೀದಿಗಳಲ್ಲಿ ಜಗದ್ಗುರುಗಳವರ ಮೆರವಣಿಗೆಯಾಯಿತು

ಶ್ರೀಮಜ್ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಧರ್ಮಸಂಘದ ೧೦ ನೇ ಅಧಿವೇಶನವು ಮಂಗಳ – ಬುಧವಾರ ೨ ದಿನ ದೊಡ್ಡದಾಗಿ ನಡೆಯಿತು. ಸಮ್ಮೇಳನಗಳಿಗಾಗಿ ಗಣೇಶೋದ್ಯಾನದಲ್ಲಿ ನಿರ್ಮಿತವಾದ ಧರ್ಮನಗರ – ಸಭಾ ಮಂಟಪದಲ್ಲಿ ಅಸಂಖ್ಯ ಜನಸ್ತೋಮವು ನೆರೆಯುತ್ತಿದ್ದಿತು. ಜಗದ್ಗುರುಗಳವರ ಅಧ್ಯಕ್ಷ ಭಾಷಣವು ಓಜಸ್ವಿ ಮತ್ತು ಹಿರಿಯದಾಗಿದ್ದಿತು, (ಬೇರೆ ಪುಟದಲ್ಲಿ ಮುದ್ರಿಸಲ್ಪಟ್ಟಿದೆ).

— ಈ ಅಧಿವೇಶನದಲ್ಲಿ —

೧ ಗತಪರ್ಷ ನಿಧನಹೊಂದಿದ ಪ್ರಮುಖರ ಶೋಕಪ್ರಶಾತ್ತಾಪ

೨ ಧರ್ಮಸಂಘ ಉದ್ದೇಶದಂತೆ ಧರ್ಮಾಚರಣೆ ಮಾಡಬೇಕೆಂಬ

೩ ಹಿಂದೂಕೋಡನ್ನು ನಿರೋಧಿಸುವ

೪ ಅಖಂಡ ಭಾರತ ಬೇಕೆನ್ನುವ

೫ ಧರ್ಮರಾಜ್ಯ ಘೋಷಣೆ ಮಾಡಬೇಕೆನ್ನುವ

೬ ಮಂಜಾಕಾಳೇಶ್ವರಾದಿ ಮಂದಿರ ವ್ಯವಸ್ಥೆಯ

೭ ಯಾತ್ರಿಕರಿಗೆ ದೇವೀಹಾಳುವದನ್ನು ವಿರೋಧಿಸುವ

೮ ಸೋಮನಾಥ ಮಂದಿರದ ಜೀರ್ಣೋದ್ಧಾರಕ್ಕೆ ಅಭಿನಂದನ ; ಅದರಂತೆ ಕಾಶೀ, ಅಯೋಧ್ಯಾ, ವೃಂದಾವನಾದಿಗಳಲ್ಲಿ ವಿಧರ್ಮಿಗಳ ಕೈಲಿರುವ ಸ್ಥಾನಗಳನ್ನು ಹಿಂದಕ್ಕೆ ಪಡೆಯುವ

೯ ಧರ್ಮಯುದ್ಧ ಸತ್ಯಾಗ್ರಹದ ಸಮರ್ಥನೆಯ

೧೦ ದ್ವಾರಕಾದಿ ದೇವಾಲಯಗಳ ರೇಶ್ಮೆ ನಿಲ್ಲಿಸಿದುದನ್ನು ವಿರೋಧಿಸುವ

— ಗೊತ್ತುವಳಿಗಳು —

ಸರ್ವಸಮ್ಮತಿಯಿಂದ ಅಂಗೀಕರಿಸಲ್ಪಟ್ಟವು.

ರಾಮರಾಜ್ಯ ಪರಿಷತ್ತಿನ

೩ ನೇ ಅಧಿವೇಶನ

ಸದ್ಯದಲ್ಲಿಯೇ ಭಾರತದಲ್ಲೆಲ್ಲಾ ಚುನಾವಣೆಯು ಬರುವುದಾಗಿದೆ. ಆದುದರಿಂದ ಈ ಸಂದರ್ಭದಲ್ಲಿ ಧಾರ್ಮಿಕರಿಗೇ ಓಟುಗಳು ದೊರಕಾವುದಕ್ಕಾಗಿ ಹೆಚ್ಚಿನ ಪ್ರಯತ್ನವು ಅಗತ್ಯವಾದುದರಿಂದ ಧರ್ಮಸಂಘದ ಅಂಗಭೂತವಾದ ರಾಜಕೀಯ ಸಂಸ್ಥೆಯೆನಿಸಿದ ಈ ರಾಮರಾಜ್ಯ ಪರಿಷತ್ತಿನ ಸಮ್ಮೇಳನ ಅತ್ಯ

ಕಾನಪುರದಲ್ಲಿ ಜರುಗಿದ
ಅಖಿಲ ಭಾರತವರ್ಷೀಯ ಧರ್ಮಸಂಘ ದಶಮ ಮಹಾಧಿವೇಶನದ
ವಿಶೇಷಾಂಕ

ಸಂಪುಟ ೯ ಸಂಚಿಕೆ ೩೬ ॥ಶ್ರೀ॥ ತಾ॥ 21-5-1951

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
- ಶ್ರೀ ಕೈವಲ್ಯಾನಂದ ಮಠಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬ್ರೋಧಪ್ರದ ಸ್ಪಷ್ಟಾತ್ಮಿಕ ಪ್ರಕಟನಮಾಲೆ —
ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ ಸ್ವ. ಸಂಘ

ಶ್ಯಕತೆಯು ಹೆಚ್ಚಾಗಿದೆ ಆದಕ್ಕಾಗಿಯೇ ಈ ವರ್ಷದ ಅಧ್ಯಕ್ಷತೆಗಾಗಿ ದೇವಾಸ ಸಂಸ್ಥಾನದ ಸೀನಿಯರ್ ರಾಜಕುಮಾರೀ ಪ್ರಭಾವತಿರಾಜೀರವರನ್ನು ಶ್ರೀ ಕರಪಾತ್ರಿಗಳವರು ಆರಿಸಿದರು. ರಾಜಕುಮಾರಿಯವರು ಈಚೆಗೆ ಮೂರು ವರ್ಷಗಳಿಂದ ಧರ್ಮಸಂಘದೊಂದಿಗೆ ಸೇರಿ ಅಖಿಲ ಭಾರತದಲ್ಲೆಲ್ಲಾ ಪ್ರಾಯಾಣ ಮಾಡಿದ್ದಾರೆ; ಅವರ ವಿದ್ವತ್ತಿಗೆ ವಿರೋಧಪಕ್ಷದವರೂ ಮುಗ್ಧರಾಗಿದ್ದಾರೆ.

೮ನೆ, ಸೋಮ, ಮಂಗಳ ಈ ಮೂರು ದಿನಗಳ ಕಾಲ ರಾಜಕುಮಾರಿಯವರ ಅಧ್ಯಕ್ಷತೆಯಲ್ಲಿ ರಾಮರಾಜ್ಯ ಪರಿಷತ್ತಿನ ಮೂರನೇ ಅಧಿವೇಶನವು ಜರುಗಿತು. ಇವರ ಅಧ್ಯಕ್ಷ ಭಾಷಣವು ವಿದ್ವತ್ಪೂರ್ಣವೂ, ಓಜಸ್ವಿಯೂ ಆಗಿದ್ದಿತು.

೧ ಮುಂಬರುವ ಚುನಾವಣೆಯಲ್ಲಿ ಧರ್ಮನಿರಪೇಕ್ಷವಾದ ಭೌತಿಕ ವಾದಿಗಳಿಗೆ ಕೊಡದೆ ರಾಮರಾಜ್ಯ ಪರಿಷತ್ತಿಗೇ ಓಟುಕೊಡಬೇಕೆಂಬ

೨ ಈಗಿರುವ ಶಾಸನ ವಿಧಾನವನ್ನು ಚುನಾವಣೆಯಾಗುವವರೆಗೆ ತಿದ್ದ ಬಾರದೆನ್ನುವ

೩ ಕಾಶ್ಮೀರವನ್ನು ಬೆಡಬಾರದೆನ್ನುವ

೪ ಗೋವಧ, ಹಿಂದೂಕೋಡನ್ನು ವಿರೋಧಿಸುವ

೫ ಆಯುರ್ವೇದ ಚಿಕಿತ್ಸಾ ಪದ್ಧತಿಯನ್ನನುಸರಿಸಬೇಕೆನ್ನುವ

೬ ಭ್ರಷ್ಟಾಚಾರ ಮುಂತಾದ ಸ್ಥಳದಲ್ಲಿ ಹಸಿದವರನ್ನು ಹಿಂಸಿಸಿದುದರ ವಿರೋಧ

೭ ಗ್ವಾಲಿಯರ್ ವಿದ್ಯಾರ್ಥಿಗಳ ಮೇಲೆ ನಡೆದ ಹಿಂಸೆಯ ವಿರೋಧ

೮ ಅವೈಧಾನಿಕ ಸಂಸ್ಥೆಗಳಿಗೆ ರೇಶನ್ ಕೊಡಬಾರದೆನ್ನುವ

ಈ ಗೊತ್ತುವಳಿಗಳು ಸರ್ವಸಮ್ಮತಿಯಿಂದ ಸ್ವೀಕೃತವಾದುವು.

ಧರ್ಮಸಂಘ – ರಾಮರಾಜ್ಯ ಪರಿಷತ್ತಿನ ಹೊಸ ವರ್ಷದ ಕಾರ್ಯಕಾರೀ ಸಮಿತಿ ಮತ್ತು ಚುನಾವಣೆ ಬೋರ್ಡುಗಳ ರಚನೆಯಾಯಿತು.

— ಇದಲ್ಲದೆ —

ಅಖಿಲ ಭಾರತ ಮಹಿಳಾಸಂಘದ ಸಮ್ಮೇಳನವು ಶ್ರೀಮತೀ ವಿದ್ಯಾದೇವಿಯವರ ಅಧ್ಯಕ್ಷತೆಯಲ್ಲಿಯೂ
ಗೋರಕ್ಷಾ ಸಮ್ಮೇಳನವು ಶೇಟ್ ಚಿರಂಜೀಲಾಲರ ಅಧ್ಯಕ್ಷತೆಯಲ್ಲಿಯೂ
ಧರ್ಮವೀರದಳ ಸಮ್ಮೇಳನವು ಶ್ರೀ ಆತ್ಮದೇವಾಶ್ರಮ ಸ್ವಾಮಿಗಳ ಅಧ್ಯಕ್ಷತೆಯಲ್ಲಿಯೂ
ಸಾಂಸ್ಕೃತಿಕ ಕವಿತಾ ಸಮ್ಮೇಳನವು ಶ್ರೀ ಅತಲಜೀಯವರ ಅಧ್ಯಕ್ಷತೆಯಲ್ಲೂ
— ಯಶಸ್ವಿಯಾಗಿ ಜರುಗಿದುವು —

ಹೀಗೆ ಶ್ರೀ ಶ್ರೀ ಕರಪಾತ್ರಿಗಳವರ ಅಖಂಡ ಪ್ರಯತ್ನದಿಂದ ಸಮ್ಮೇಳನಗಳೆಲ್ಲಾ ಚೆನ್ನಾಗಿ ನೆರವೇರಿದವು.



"ಗೋರಕ್ಷಣ"
ಕಾರ್ಯ ಎಲ್ಲೆಲ್ಲೂ ನಡೆಯಲಿ

Edited, Printed and Published by M. S. Krishna Rao, at the Satyavadi Press Chamarajapuram Mysore

ಶ್ರೀ ದ್ವಾರಕಾಧೀಶೋ ವಿಜಯತೇತರಾಮ್

ಕಾನಪುರದಲ್ಲಿ ಜರುಗಿದ

ಅಖಿಲ ಭಾರತವರ್ಷೀಯ ಧರ್ಮಸಂಘ ದಶಮ ಮಹಾಧಿವೇಶನದ

ಸಭಾಪತಿಗಳಾದ

ಅನಂತ ಶ್ರೀ ವಿಭೂಷಿತ ಪ. ಪ. ಪೂ. ಪಾ. ಶ್ರೀ ಜಗದ್ಗುರು
ಶ್ರೀ ದ್ವಾರಕಾ ಪೀಠಾಧೀಶ್ವರ ಶ್ರೀ ಅಭಿನವ ಸಚ್ಚಿದಾನಂದ
ತೀರ್ಥಸ್ವಾಮಿಗಳವರ

ಅಖಿ ಭಾಷಣದ ಸಾರಾಂಶ

ಚೈತ್ರ ಶು. ೧೪ ಸಂ. ೨೦೦೭, ತಾ|| 20-4-1951

ತ್ರಯೀವೇದ್ಯಂ ಹೃದ್ಯಂ ತ್ರಿಪುರಹರಮಾದ್ಯಂ ತ್ರಿನಯನಂ
ಜಟಾಭಾರೋದಾರಂ ಚಲಮುರಗಹಾರಂ ಮೃಗಧರಂ |
ಮಹಾದೇವಂ ದೇವಂ ಮಯಿ ಸದಯಭಾವಂ ಸಕರುಣಂ
ಚಿದಾಲಂಬಂ ಸಾಂಬಂ ಶಿವವತಿ ಪಡಂಬಂ ಹೃದಿ ಭಜೆ ||

ಕಾವೇದಾದಿಸರ್ವವ್ಯಜಗಾರಡಾಭ್ಯಾಂ, ವಿವೇಕವೈರಾಗ್ಯನಿಧಿ ಪ್ರದಾಭ್ಯಾಮ್ |
ಮೋದ ಪ್ರದಾಭ್ಯಾಂ ದ್ಯುತಮೋಕ್ಷದಾಭ್ಯಾಂ, ನಮೋ ನಮಃ
ಶ್ರೀ ಗುರುಪಾದುಕಾಭ್ಯಾಮ್ ||

೧ ಪ್ರಸ್ತಾವನೆ — ಧರ್ಮರಕ್ಷಕನಾದ ಭಗವಂತ ಅಸೀಮ ಕೃಪೆಯಿಂದ ಆರ್ಯಾವರ್ತದ ಈ ಜಗತ್ಪಾವನೀ ಪುಣ್ಯತೋಯಾ ಜಾಹ್ನವಿಯ ಪವಿತ್ರತಮ ತಟದಲ್ಲಿರುವ ಈ ಕರ್ಣಪುರದಲ್ಲಿ ಅಖಿಲ ಭಾರತ ವರ್ಷೀಯ ಧರ್ಮಸಂಘದ ಹತ್ತನೆಯ ಮಹಾಧಿವೇಶನವೂ ಇತರ ಅನೇಕ ಸಮ್ಮೇಳನಗಳೂ ಯಜ್ಞಗಳೂ ನಡೆಯುತ್ತಿರುವುದನ್ನು ಆದಕ್ಕಾಗಿ ಸರ್ವದೇಶೀಯ ಸಂತಮಹಾತ್ಮರೂ, ನೇತೃಗಳೂ, ವಿದ್ವಾಂಸರೂ, ಧರ್ಮವೀರರೂ, ಧರ್ಮಪ್ರಾಣಜನತೆಯೂ ಧರ್ಮರಕ್ಷಣೆಯ ಈ ಮಹಾಕಾರ್ಯದಲ್ಲಿ ಒಂದುಗೂಡಿರುವುದನ್ನೂ ನೋಡಿ ಪರಮ ಆನಂದವಾಗುತ್ತಿದೆ.

೨ ಧರ್ಮಪಾತ್ರತಸ್ಯೈ — ಧರ್ಮದ ಮಹತ್ತತೆಯನ್ನು ಕೊಂಡಾಡುತ್ತಾ ಉಪನಿಷತ್ತು ಹೇಳುತ್ತದೆ — " ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ, ಲೋಕೇ ಧರ್ಮಿಷ್ಠಂ ಪ್ರಜಾ ಉಪಸರ್ಪನ್ತಿ, ಧರ್ಮೇಣ ಪಾಪಮಪನುದತಿ, ಧರ್ಮೇ ಸರ್ವಂ ಪ್ರತಿಷ್ಠಿತಂ, ತಸ್ಮಾದ್ಧರ್ಮಂ ಪರಮಂವದನ್ತಿ " ಅರ್ಥಾತ್ ಧರ್ಮವು ಸಮಸ್ತ ಲೋಕದ ಪ್ರತಿಷ್ಠೆಗೆ ಕಾರಣವಾಗಿದೆ. ವಿಶ್ವದಲ್ಲಿ ಜನರು ಧರ್ಮಾತ್ಮನನ್ನೇ ಮರೆಹೋಗುತ್ತಾರೆ, ಧರ್ಮದಿಂದ ಪಾಪವು ತೊಲಗುತ್ತದೆ ಧರ್ಮದಲ್ಲಿ ಎಲ್ಲವೂ ಪ್ರತಿಷ್ಠಿತವಾಗಿದೆ. ಆದ್ದರಿಂದ ಧರ್ಮವನ್ನು ಶ್ರೇಷ್ಠವೆನ್ನುತ್ತಾರೆ.

ಮಹಾಭಾರತದಲ್ಲಿ " ಧಾರಣಾದ್ಧರ್ಮಮಿತ್ಯಾಹುಃ " ಅಂದರೆ ಧರಿಸಿರುವುದರಿಂದ ಧರ್ಮವೆಂದು ಹೇಳುತ್ತಾರೆಂದಿದೆ. ವೈಶೇಷಿಕಸೂತ್ರದಲ್ಲಿ " ಯತೋಭ್ಯುದಯನಿಶ್ರೇಯಸಸಿದ್ಧಿಸ್ಸಧರ್ಮಃ " ಅಂದರೆ ಯಾವುದರಿಂದ ಇಹಪರಲೋಕಗಳ ಕಲ್ಯಾಣವೂ ಮುಕ್ತಿಯೂ ದೊರೆಯುವುದೋ ಅದು ಧರ್ಮವೆಂದು ಲಕ್ಷಣವನ್ನು ತಿಳಿಸಿದೆ. ಆದ್ದರಿಂದಲೇ ಭಗವಾನ್ ವ್ಯಾಸದೇವರು " ಊರ್ಧ್ವಬಾಹುರ್ವಿರಾಮ್ಯೇಷ ನ ಚ ಶಣ್ವಿಚ್ಛೃಣೋತಿ ಮೆ | ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೆ ? " ಎಂದು ಆಕ್ರೋಶ ಪಟ್ಟಿರುವರು. ವಸ್ತುತಃ ಧರ್ಮದಿಂದಲೇ ಅರ್ಥಕಾಮಗಳನ್ನು ಕೈಗೂಡಿಸುತ್ತಿರುವಾಗ ಈ ಮಂಗಳಮಯ ಸನಾತನ ಧರ್ಮದ ಬೆಂಬಿಡುವುದಾದರೂ ಏಕೆ ? ಕಾರಣವೇನೆಂದರೆ ಒರಿಯ ಹೊಟ್ಟೆ ಬಟ್ಟೆಗೆ ಸಿಕ್ಕಿದ ಮಾತ್ರದಿಂದ ಮನುಷ್ಯನ ಮನುಷ್ಯತ್ವವು ಪೂರ್ಣವಾಗುವುದಿಲ್ಲ. ಬೇರೆ ಜಂತುಗಳಂತೆ ಮಾನವನು ಕೇವಲ ಐಹಿಕ ವಿಷಯಭೋಗದಲ್ಲಿಯೇ ಬಿದ್ದಿದ್ದರೆ

ಶ್ರೀ ದ್ವಾರಕಾ ಶಾರದಾ ಪೀಠಾಧೀಶ್ವರ ಜಗದ್ಗುರು ಶಂಕರಾಚಾರ್ಯ

ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರು

ಅವನ ಜನ್ಮವು ಪಶುಜನ್ಮಕ್ಕಿಂತ ಕಡೆಯೇ ಸರಿ. ಅದುದರಿಂದ ಮನುಷ್ಯನೆನಿಸಿಕೊಳ್ಳಲು ಪ್ರಧಾನ ಲಕ್ಷಣವಾದ ಧರ್ಮಾಚರಣೆಯನ್ನು ಮೈಗೂಡಿಸಿಕೊಂಡು ಧರ್ಮಸ್ವಾತಂತ್ರ್ಯವನ್ನು ಗಳಿಸಲೆತ್ನಿಸುವುದು ಅತ್ಯಗತ್ಯ.

೩ ಧರ್ಮಾಚಾರ್ಯರ ಹೊಣೆಗಾರಿಕೆ — ಕಲಿಯುಗದಲ್ಲಿ ಸುಮಾರು ಎರಡುವರೆ ಸಾವಿರ ವರ್ಷ ಕಳೆಯುತ್ತಿರಲು, ಭಾರತದಲ್ಲಿ ಎಲ್ಲೆಲ್ಲೂ ಚಾರ್ವಾಕಕ್ಷಪಣಕಾದಿ ವೇದವಿಶುದ್ಧ ಮತಗಳ ಹಾವಳಿ ನಡೆಯುತ್ತಿದ್ದು ಸನಾತನ ವೈದಿಕ ಧರ್ಮವು ಕಣ್ಮರೆಯಾಗುವ ಸ್ಥಿತಿಯಲ್ಲಿದ್ದಾಗ ಶ್ರೀಮಜ್ಜಗದ್ಗುರು ಆದ್ಯ ಶಂಕರ ಭಗವತ್ಪಾದರವರ ರೂಪದಲ್ಲಿ ಭಗವಾನ್ ಶ್ರೀ ಶಂಕರನು ತಾನೇ ಅವತಾರವನ್ನೆತ್ತಿ ಧರ್ಮವಿರುದ್ಧಗಳಾದ ಕುಮತಗಳನ್ನು ಖಂಡಿಸಿ ಸನಾತನ ಧರ್ಮದ ಪುನರ್ಮಂಡನಸ್ಥಾಪನೆಯನ್ನು ಮಾಡಿದರು. ಇದನ್ನೇ ಶ್ರೀ ವಿದ್ಯಾರಣ್ಯ ಸ್ವಾಮಿಗಳವರು ಹೀಗೆ ಒಣ್ಣಿಸಿರುವರು —

ಅಜ್ಞಾನಾಂ ತರ್ಗಹನೆ ಪತಿತಾನಾತ್ಮ ವಿದ್ಯೋಪದೇ ಶೈ
ಸ್ತ್ರಾತುಂ ಲೋಕಾನ್ ಭಪದಪಶಿಖಾತಾಪಪಾಪಚ್ಯಮೋನಾನ್ |
ತ್ಯಕ್ತ್ವಾ ವೇಸಂ ಪಟವಿಟಪಿನೋ ಮೂಲತೋ ನಿಷ್ಪತನ್ತೀ
ಶಂಭೋರ್ವಾತಿಶ್ಚರತಿ ಭುವನೇ ಶಂಕರಾಚಾರ್ಯರೂಪಾ ||

ಆ ಕಾಲದಲ್ಲಿ ಶ್ರೀ ಶಂಕರಾಚಾರ್ಯರು ಅವತಾರವನ್ನೆತ್ತಿ ಸನಾತನ ಧರ್ಮವ್ಯವಸ್ಥಾಪನಾ ಕಾರ್ಯವನ್ನು ಮಾಡದಿರುತ್ತಿದ್ದರೆ ಸನಾತನ ಧರ್ಮವು ಅದೆಂದೋ ಲುಪ್ತಪ್ರಾಯವಾಗುತ್ತಿದ್ದಿತು. ಇವರು ತಾವು ವ್ಯವಸ್ಥಾಪಿಸಿದ ವೈದಿಕ ಧರ್ಮ

ವನ್ನೂ ಅದ್ವೈತ ಸಿದ್ಧಾಂತವನ್ನೂ ಚಿರಸ್ಥಾಯಿಗೊಳಿಸುವುದಕ್ಕಾಗಿ ಭಾರತದ ನಾಲ್ಕೂ ದಿಕ್ಕುಗಳಲ್ಲಿ — ಪುರಿ, ಶೃಂಗೇರಿ, ದ್ವಾರಿಕಾ, ಬದರಿಕಾಶ್ರಮಗಳಲ್ಲಿ ನಾಲ್ಕು ಪೀಠಗಳನ್ನು ಸ್ಥಾಪಿಸಿ, ಅವುಗಳಲ್ಲಿ ತಮ್ಮ ನಾಲ್ವರು ಮುಖ್ಯ ಶಿಷ್ಯರನ್ನು ನೆಲೆಗೊಳಿಸಿದರು. ಈ ನಾಲ್ಕು ಪೀಠಗಳ ಪರಂಪರೆಯು ಆಚಾರ್ಯರಲ್ಲದೆ ಅನಂತರ ಒಂದು ಶ್ರೀ ರಾಮಾನುಜಾಚಾರ್ಯ, ಶ್ರೀ ಮಧ್ವಾಚಾರ್ಯ ಮತ್ತು ಶ್ರೀ ವಲ್ಲಭಾಚಾರ್ಯಾದಿ ಧರ್ಮಾಚಾರ್ಯರುಗಳು ಬೇರೆ ಬೇರೆ ಅನೇಕ ಮಠಗಳನ್ನು ಸ್ಥಾಪಿಸಿದರು. ಈ ಪೀಠಗಳಲ್ಲಿಯೂ ಮಠಗಳಲ್ಲಿಯೂ ಒಂದು ಆಚಾರ್ಯವರ್ಗವೂ ಈವರೆಗೆ ಧರ್ಮ ವ್ಯವಸ್ಥಾಪನೆಯನ್ನು ಮಾಡುತಾ ಬಂದಿದ್ದಾರೆ.

೪ ಭಾರತದ ಪ್ರಾಚೀನ ಸ್ಥಿತಿ — ಭಾರತ ವರ್ಷವು ಧರ್ಮ ಮತ್ತು ಜ್ಞಾನಪ್ರಧಾನ ದೇಶವಾಗಿತ್ತು. ಇಲ್ಲಿಯ ಯಾವತ್ತೂ ಪ್ರಜೆಗಳು ವರ್ಣಾಶ್ರಮ ಧರ್ಮಪರಾಯಣರೂ, ಈಶ್ವರ ಭಕ್ತಿ ಸಂಪನ್ನರೂ, ಸತ್ಯವಕ್ತೃಗಳೂ, ದೈವಿ ಸಂಪದ್ಭರಿತರೂ ಆಗಿರುತ್ತಿದ್ದರು. ನಾಲ್ಕೂ ವರ್ಣದವರು ತಮ್ಮ ತಮ್ಮ ಧರ್ಮವನ್ನು ಸಂಪೂರ್ಣವಾಗಿ ಪಾಲಿಸುತ್ತಿದ್ದರಲ್ಲದೆ ತಮ್ಮೊಳಗೆ ಯಾವುದೇ ವಿರೋಧವಿಲ್ಲದೆ ನಡೆದುಕೊಳ್ಳುತ್ತಿದ್ದರು. ಬ್ರಾಹ್ಮಣ ವರ್ಣದವರು ನ್ಯಾಯಃ ಆಡಂಬರವಿಲ್ಲದೆ ಪ್ರಶಾಂತವಾದ ಅಡವಿಗಳಲ್ಲಿ ಕುಟಿಯನ್ನು ಮಾಡಿಕೊಂಡು ನಿಃಸ್ಪೃಹ ವೃತ್ತಿಯಿಂದ ನಿವಾಸ ಮಾಡುತ್ತಿದ್ದರು ಹಾಗೂ ಜಗತ್ತಿನ ಕಲ್ಯಾಣಕ್ಕಾಗಿಯೇ ತಪಶ್ಚರಣೆ ಮಾಡುತ್ತಿದ್ದರು. ಅವರು ತನ್ನ ವರ್ಣಧರ್ಮವಾದ ಷಟ್ಕರ್ಮಗಳಿಂದ ತಮ್ಮ ಮತ್ತು ಬೇರೆಯವರ ಶ್ರೇಯಸ್ಸನ್ನು ಸಾಧಿಸುತ್ತಿದ್ದರು. ಕ್ಷತ್ರಿಯರು ತನ್ನ ಸ್ವಧರ್ಮವಾದ ರಾಷ್ಟ್ರರಕ್ಷಣಾ ಕಾರ್ಯವನ್ನು ಪ್ರಾಮಾಣಿಕತೆಯಿಂದ ನಿರ್ವಹಿಸುತ್ತಿದ್ದರು ಗೋಬ್ರಾಹ್ಮಣ ಪಾಲನೆಯನ್ನೆ ತಮ್ಮ ಪವಿತ್ರ ಧ್ಯೇಯವೆಂದು ತಿಳಿಯುತ್ತಿದ್ದರು ರಾಷ್ಟ್ರಕ್ಕಾಗಿಯೇ ತನ್ನ ಶರೀರವೂ ಸಕಲ ಸಂಪತ್ತೂ ಇದೆಯೆಂದು ಅವರು ಭಾವಿಸುತ್ತಿದ್ದರು. ಸಮಯ ಬಂದಾಗ ಸರ್ವಸ್ವವನ್ನೂ ತ್ಯಾಗ ಮಾಡಲು ಹಿಂದೆಗೆಯುತ್ತಿದ್ದಿಲ್ಲ ಅವರು. ಧರ್ಮಯುದ್ಧವನ್ನವರು ತಮ್ಮ ಪವಿತ್ರ ಶ್ರೇಯಸ್ಸಾಧಕ ಸಾಧನವೆಂದು ತಿಳಿಯುತ್ತಿದ್ದರು — 'ಧರ್ಮೇಣೈದ್ಧಿ ಯುದ್ಧಶ್ಚ್ರೇಯೋನ್ಯತ್ಕ್ಷತ್ರಿಯಸ್ಯ ನ ವಿದ್ಯತೆ |' ಆ ಕಾಲದ ಧರ್ಮಯುದ್ಧವು ಎಷ್ಟು ಪ್ರಾಮಾಣಿಕತನದಿಂದ ನಡೆಯುತ್ತಿತ್ತೆಂಬುದು ಪರದೇಶೀಯ ಪ್ರವಾಸಿಕನೊಬ್ಬನು ಬರೆದೀ ವಾಕ್ಯಗಳಿಂದ ಗೊತ್ತಾಗುತ್ತದೆ — "ಭಾರತದಲ್ಲಿ ಯುದ್ಧರಂಗದಲ್ಲಿ ಮಾತ್ರ ಸರ್ವನಾಶವೇ ನಡೆಯುತ್ತಿದ್ದರೂ ಅದಕ್ಕೆ ಒಂದೇ ಮೈಲು ದೂರದ ಅರಣ್ಯದಲ್ಲಿ ನೆಲೆಸಿರುವ ಋಷಿಮುನಿಗಳು ಅಂಜಿಕೆ ಇಲ್ಲದೆ ಶಂಕೆ ಇಲ್ಲದೆ ಅವರವರ ತಪೋಯಜ್ಞಾದಿ ಅನುಷ್ಠಾನಗಳನ್ನು ನೆರವೇರಿಸುತ್ತಿದ್ದರು; ಒಳಯ ಹೊಲದಲ್ಲಿ ಕೃಷಿಕರು ಭೀತಿಯಿಲ್ಲದೆ ಉಳುತ್ತಿದ್ದರು; ಇಷ್ಟು ಹತ್ತಿರ ಯುದ್ಧವಾಗುತ್ತಿದ್ದರೂ ತಮ್ಮ ಮೇಲೆಲ್ಲಾದರೂ ಶಸ್ತ್ರಪ್ರಹಾರವಾದೀತೆಂಬ ಆಶಂಕೆಯು ಯಾರಿಗೂ ಇದ್ದಿಲ್ಲ". ಒಟ್ಟಾರೆ ಆ ದಿನಗಳ ಧರ್ಮಯುದ್ಧವು ಸಮಾನಬಲವಾದ ಯೋಧರಲ್ಲಿಯೇ ನಡೆಯುತ್ತಿತ್ತೇ ಹೊರತು ನಿರಪರಾಧಿಗಳಿಗೆ ಯಾವುದೇ ತರದ ಆತಂಕರೂಪವಾಗಿರುತ್ತಿದ್ದಿಲ್ಲ.

ಇದಕ್ಕೆ ವಿಪರೀತವಾಗಿ ಇಂದಾದರೊ ಯುದ್ಧದ ಫಲರೂಪವಾದ ಕ್ಲೇಶದಿಂದ ಇಡಿಯ ವಿಶ್ವದ ಯಾವುದೊಂದು ಪ್ರಾಣಿಯೂ ತಪ್ಪಿ ಉಳಿದಿಲ್ಲ. ಕಳೆದ ದ್ವಿತೀಯ ವಿಶ್ವಯುದ್ಧವು ಐದು ಸಾವಿರ ಮೈಲು ದೂರದಲ್ಲಿ ನಡೆಯುತ್ತಿದ್ದಾಗ್ಯೂ, ಯುದ್ಧವು ಮುಗಿದೀಗ ಐದು ವರ್ಷದ ಮೇಲಾದರೂ, ಅದರಿಂದುತ್ಪನ್ನವಾದ ಅನ್ನವಸ್ತ್ರಾದಿಗಳ ಅಭಾವ, ಮಹಾರ್ಘತೆ, ಮುಂತಾದ ಕಷ್ಟಗಳು ಈವರೆಗೂ ಭಾರತವಾಸಿಗಳನ್ನು ಪೀಡಿಸುತ್ತಿವೆ. ಇದರಿಂದ ಇಂದಿನ ಯುದ್ಧಗಳು ಅಧರ್ಮ ಮತ್ತು ಸ್ವಾರ್ಥಿಗಳ ಕೋಲಾಹಲ ಸ್ವರೂಪವೆಂದು ನಿಶ್ಚಿತವಾಗುತ್ತದೆ;

ಅಂದಿನ ವೈಶ್ಯರೂ ಮಹಾಭಾರತದಲ್ಲಿ ವರ್ಣಿಸಿದ ತುಲಾಧಾರನಂತೆ ಅತ್ಯಂತ ಪ್ರಾಮಾಣಿಕರೂ ಅಲ್ಪತೃಷ್ಣರೂ ರಾಷ್ಟ್ರೋನ್ನತಿಯ ದೃಷ್ಟಿಯಿಂದಲೇ ವ್ಯಾಪಾರವೃತ್ತಿ ಮಾಡುವವರೂ ಆಗಿದ್ದರು ಇದರಿಂದ ಆ ಕಾಲದಲ್ಲಿ ಎಲ್ಲಾ ಪದಾರ್ಥಗಳೂ ಉಚಿತವಾದ ಅಲ್ಪ ಮೌಲ್ಯದಲ್ಲಿ ದೊರೆಯುತ್ತಿದ್ದುವು. ಇಂದಿನಂತೆ ಮಹಾರ್ಘತೆ, ಪೆಸ್ತಗಳ ಕೃತ್ರಿಮ ಅಭಾವ ಇತ್ಯಾದಿಗಳಿಲ್ಲದ್ದರಿಂದ ಸರ್ವಸ್ವ ಪ್ರಜೆಗಳೂ ಪೂರ್ಣಸುಖದಿಂದಿರುತ್ತಿದ್ದರು. ಇದೇ ರೀತಿ ಶೂದ್ರರೂ ತಮ್ಮ ಧರ್ಮವಾದ ಸೇವಾವೃತ್ತಿಗಳನ್ನು ಕರ್ತವ್ಯದೃಷ್ಟಿಯಿಂದ ಮಾಡುತ್ತಿದ್ದರು.

ಮೇಲೆಹೇಳಿದಂತೆ ನಾಲ್ಕು ವರ್ಣದವರು 'ಸ್ವೇ ಸ್ವೇ ಕರ್ಮಣಿ ಭಿರತಃ ಸಂಸಿದ್ಧಿಂ ಲಭತೇ ನರಃ' ಎಂಬ ಗೀತೋಕ್ತ್ಯನುಸಾರವಾಗಿ ಅಧ್ಯಾತ್ಮಿಕನಿಷ್ಠರಾಗಿ ತಮ್ಮ ತಮ್ಮ ಕೆಲಸವನ್ನು ಆಲಸ್ಯವಿಲ್ಲದೆ ಮಾಡುತ್ತಿದ್ದರು. ಹಾಗೂ 'ಪರಸ್ಪರಂ ಭಾವಯನ್ತಃ ಶ್ರೇಯಃ ಪರಮವಾಪ್ಸ್ಯಥ' ಎಂಬಂತೆ ಅನ್ಯೋನ್ಯ ಪ್ರೇಮಭಾವದಿಂದ ಅಭಿವೃದ್ಧಿ ಹೊಂದುತ್ತಿದ್ದರು. ಪ್ರಜೆಗಳ ಮೇಲೆ ಶಾಸನ ಮಾಡುವ ಆ ಕಾಲದ ಭಾರತದ ರಾಜನೀತಿಯೂ ಸಂಪೂರ್ಣ ಶ್ರುತಿಸ್ಮೃತ್ಯಾದಿ ಧರ್ಮಾನುಶಾಸನ ಗ್ರಂಥಗಳಿಗೆ ಅಧೀನವಾಗಿರುತ್ತಿತ್ತು. ರಾಜ್ಯ ವಿಧಾನವು ಶುಕ್ರಕಾವಂದಕೀಯಾದಿ ನೀತ್ಯನುಸಾರ ನಡೆಯುತ್ತಿತ್ತು. ಪ್ರಾಯಃ ರಾಜರುಗಳು ನ್ಯಾಯಪ್ರಿಯರೂ ಗುಣಾನುರಾಗಿಗಳೂ, ಶಾಸ್ತ್ರಪಾರಂಗತರೂ ಆಗಿರುತ್ತಿದ್ದರು. ಇದರಿಂದ ಆ ಸಮಯದಲ್ಲಿ ಸನಾತನ ಹಿಂದೂಸಾಮ್ರಾಜ್ಯವೂ ಸರ್ವಪ್ರಕಾರದಿಂದ ಸಂಪನ್ನವೂ ಸಮೃದ್ಧವಾಗಿ ಸುಖಶಾಂತಿಯು ನೆಲೆವೀಡಾಗಿರುತ್ತಿತ್ತು.

ಭಾರತದ ಅಧುನಿಕ ಸ್ಥಿತಿ— ಈಗಾದರೋ ಅಂತಹ ಧರ್ಮ ಮತ್ತು ಅಧ್ಯಾತ್ಮ ಸಂಸ್ಕೃತಿ ಪ್ರಧಾನವಾದ ಈ ಭಾರತದಲ್ಲಿ ಸರ್ವತ್ರ ಭೌತಿಕವಾದವೂ ನಾಸ್ತಿಕತೆಯೂ ಆಸುರೀಸಂಪತ್ತಿಯೂ ಅಭಿವೃದ್ಧಿಗೊಂಡು ತತ್ಪರಿಣಾಮವಾಗಿ ಅಶಾಂತಿಯೂ, ದುಃಖವೂ, ಅನ್ನವಸ್ತ್ರಾದಿಗಳ ಅಭಾವವೂ, ಅತಿವೃಷ್ಟಿಯೂ ಅನಾವೃಷ್ಟಿಯೂ ಪ್ರವಾಹವೂ ಭೂಕಂಪವೂ ಇತ್ಯಾದಿ ದೈವೀ ಉಪದ್ರವಗಳು ಕಂಡುಬರುತ್ತಿವೆ ಜನತೆಯಲ್ಲಿ ವರ್ಗವಿಗ್ರಹ, ಪರಸ್ಪರ ಈರ್ಷ್ಯಾದ್ವೇಷಾದಿ ಬೆಳೆಯುತ್ತಿವೆ. ಮಾನವರೇ ದಾನವರಂತೆ ಆಚರಿಸುತ್ತಿದ್ದಾರೆ. ವರ್ಣಸಾಂಕರ್ಯವೂ ಕರ್ಮಸಾಂಕರ್ಯವೂ ಹೆಚ್ಚಿ ಕುಲಪವಿತ್ರತೆ ಮುಂತಾದುವು ದೂರವಾಗಿವೆ. ಪ್ರತಿಯೊಂದು ವರ್ಣ ಮತ್ತು ಆಶ್ರಮದ ಸ್ತ್ರೀ ಪುರುಷರು ಸ್ವೋಚಿತ ಕರ್ಮಗಳ ತ್ಯಾಗದಲ್ಲಿಯೇ ತಮ್ಮ ಗೌರವವನ್ನು ಕಾಣತೊಡಗಿರುವರು. ದೇಶದಲ್ಲಿ ಕೃಷಿ ವಾಣಿಜ್ಯಾದಿ ಉದ್ಯೋಗಗಳೂ ಪ್ರಾಮಾಣಿಕತೆಯಿಂದ ಮಾಡಲ್ಪಡದಿರುವ ಕಾರಣ ಮೇಲೆ ಹೇಳಿದಂತೆ ಅನ್ನವಸ್ತ್ರಾದಿಗಳ ಅಭಾವವು ಮತ್ತೂ ಹೆಚ್ಚುತ್ತಿದೆ. ಮಹಾ ಪಾಪ ಕಲಂಕರೂಪವಾದ ಗೋಹತ್ಯೆ, ನರಹತ್ಯೆ ಮುಂತಾದ ಹಿಂಸಾತ್ಮಕೃತ್ಯಗಳು ಸರಕಾರದ ಮೂಲಕವೇ ಹೆಚ್ಚಾಗಿ ನಡೆಯುತ್ತಿವೆ. ಭಾರತದ ಬಾಹ್ಯಪರಿಸ್ಥಿತಿಯೂ ಸ್ವಲ್ಪವೂ ತೃಪ್ತಿಕರವಾಗಿಲ್ಲ ಇದರ ಅಂತಾರಾ

ಕೇಂದ್ರಾಡಳಿತದವರಿಗೆ ಶ್ರೀ ಶ್ರೀಗಳವರ ತಂತಿ

(ಸ್ವಂತ ಸುದ್ದಿಗಾರರಿಂದ ತಂತಿ)

ಅಬು; ಮೆ 15

ಕಾನ್ಪುರದಲ್ಲಿ ಇತ್ತೀಚಿಗೆ ಸಮಾವೇಶಗೊಂಡಿದ್ದ ಅಖಿಲ ಭಾರತ ಧರ್ಮ ಸಂಘ ಸಂಮೇಳನ ಮತ್ತು ರಾಮರಾಜಪರಿಷತ್‌ನಲ್ಲಾದ ನಿರ್ಣಯದಂತೆ ನಾವು ರಾಜ್ಯಾಂಗದ ತಿದ್ದುಪಡಿಯನ್ನು ಪ್ರತಿಭಟಿಸುತ್ತೇವೆ. ಆದುದರಿಂದ ತಿದ್ದುಪಡಿ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕು ಮತ್ತು ವಾಗ್ದಾನ ಮಾಡಿದ ಮೂಲಭೂತ ಹಕ್ಕುಗಳನ್ನು ಯಾವ ಬದಲಾವಣೆಯಿಲ್ಲದೇ ರಕ್ಷಿಸಬೇಕೆಂದು ನಿಮ್ಮನ್ನು ಒತ್ತಾಯ ಪಡಿಸುತ್ತೇವೆ.

— ಎಂದು ಅಖಿಲ ಭಾರತ ಧರ್ಮಸಂಘದ ಅಧ್ಯಕ್ಷರು ಮತ್ತು ದ್ವಾರಕಾ ಶ್ರೀ ಶಾರದಾ ಪೀಠದ ಶ್ರೀ ಶ್ರೀಜಗದ್ಗುರು ಮಹಾಸ್ವಾಮಿಗಳವರು ಮಾನ್ಯ ರಾಜೇಂದ್ರಬಾಬು, ನೆಹರೂಜಿ ನ್ಯಾಯಾಂಗ ಸಚಿವರು ಮತ್ತು ಪಾರ್ಲಿಮೆಂಟ್ ಅಧ್ಯಕ್ಷರಿಗೆ ತಂತಿ ಕಳಿಸಿದ್ದಾರೆ

ಹೀಗೆಯೇ ಸಾರ್ವಜನಿಕರು ಸರಕಾರವನ್ನು ತಂತೀ ಮೂಲಕ ಒತ್ತಾಯಪಡಿಸಬೇಕೆಂದು ಶ್ರೀ ಜಗದ್ಗುರುಗಳವರು ತಿಳಿಸಿರುತ್ತಾರೆ.

ಮಾನ್ಯ ರಾಜೇಂದ್ರಬಾಬುಗಳವರು ದ್ವಾರಕಾಕ್ಕೆ ನಿನ್ನೆ ಭೇಟಿ ಇತ್ತಿದ್ದರು. ಅವರಿಗೆ ಶ್ರೀ ಜಗದ್ಗುರುಗಳು ಆಶೀರ್ವಾದವನ್ನು ಕಳುಹಿಸಿದ್ದರು.

ಶ್ರೀ ಜಗದ್ಗುರುವರು ಶ್ರೀ ಶಂಕರ ಜಯಂತಿಯನ್ನು ಇಲ್ಲಿ ವೈಭವವಾಗಿ ಆಚರಿಸಿದರು ಮತ್ತು ದಿನವಹಿ ಉಪನ್ಯಾಸ ಮಾಡುತ್ತಿರುತ್ತಾರು.

ಗಳು ಹೇಳುತ್ತಿದ್ದಂತೆ ಶೀಘ್ರವಾಗಿ ಕಾನೂನು ಮೂಲಕ ಗೋವಧೆಯನ್ನು ನಿಲ್ಲಿಸಲಿ ಕೆಲ ನೇತೃಗಳಾದರೋ ಗೋವಧೆನಿರೋಧೀ ಕಾನೂನಿನ ವಿಷಯದಲ್ಲಿ ಪ್ರಶ್ನಿಸಲ್ಪಟ್ಟಾಗ ಹೇಳುವುದೇನೆಂದರೆ, ದೇಶದಲ್ಲಿ ಅದೆಷ್ಟೋ ದೊಡ್ಡದೊಡ್ಡ ಸಮಸ್ಯೆಗಳನ್ನು ಬಗೆಹರಿಸಲಿಕ್ಕಾಗಿ ಗೋವಧನಿರೋಧಕಾನೂನನ್ನು ಮಾಡಲಿಕ್ಕೆ ಸಮಯವೆಲ್ಲಿ ? ಎಂದು ; ಆದರೆ ಆ ಮಹಾನುಭಾವರಿಗೆ ಹಿಂದೂಕೋಡಿನಂತಹ ಅನಾವಶ್ಯಕ ಕಾನೂನನ್ನು ಪಾಸುಮಾಡಲಿಕ್ಕೇನೋ ಸಮಯ ಸಿಕ್ಕಿಯೇ ಸಿಕ್ಕುತ್ತದೆ. ಇದೆಷ್ಟು ಆಶ್ಚರ್ಯಕರ ! ಇದರ ಮೇಲೆ ಸರಕಾರವು ಈಗ ಖಾದ್ಯವಸ್ತುಗಳನ್ನು ಉಳಿಸುವ ಟೊಳ್ಳು ಭ್ರಾಂತಿಯಿಂದ ವಾನರ, ಮಯೂರ, ಗವಯ ಮುಂತಾದ ಪ್ರಾಣಿಗಳನ್ನು ನಿರ್ದಯವಾಗಿ ಕೊಲ್ಲಿಸುತ್ತಿರುವುದು ಕೂಡ ಅಹಿಂಸಕ ರಾಜ್ಯಕ್ಕೆ ಶೋಭಾಸ್ಪದವಾಗಲಾರದು. ಆದ್ದರಿಂದ ಇಂತಹ ಅನಾವಶ್ಯಕ ಕಾರ್ಯಗಳನ್ನು ನಿಲ್ಲಿಸಬಿಡುವುದು ಸರಕಾರದ ಮುಖ್ಯ ಕರ್ತವ್ಯ.

೧೦–ಮತದೇವಾಲಯಗಳ ರಕ್ಷಣೆ—ಧರ್ಮದಾಂಥನೆಗಾಗಿಯೂ ಸನಾತನ ಸಂಸ್ಕೃತಿಯ ವ್ಯವಸ್ಥಾಪನೆಗಾಗಿಯೂ ಸ್ಥಾಪಿತವಾಗಿರುವ ಮಠ, ಪೀಠಸ್ಥಾನ ತೀರ್ಥ ಕ್ಷೇತ್ರಾದಿಗಳ ರಕ್ಷಣೆಯೂ ಅಭಿವೃದ್ಧಿಯೂ ಜನತೆ ಮತ್ತು ಸರಕಾರದ ಕರ್ತವ್ಯ. ಇಂದೀಗ ಬೊಂಬಾಯಿ, ಮದರಾಸು ಮುಂತಾದ ಪ್ರಾಂತಗಳಲ್ಲಿ ಮಠ ದೇವಾಲಯಗಳ ಮೇಲೆ ಹಸ್ತಕ್ಷೇಪ ಮಾಡುವ ಧರ್ಮದಾಯ ಶಾಸನಗಳು ತರಲ್ಪಟ್ಟಿವೆ. ಅದರಿಂದ ಅಲ್ಲಿಯ ಎಲ್ಲಾ ಧಾರ್ಮಿಕಸಂಸ್ಥೆಗಳಿಗೆ ಹಲವು ತರದ ಹಾನಿಯೂ ತೊಂದರೆಗಳೂ ಉಂಟಾಗಿವೆ ಆದ್ದರಿಂದ ಇಂತಹ ಕಾನೂನುಗಳನ್ನು ಬೇಗನೆ ತೆಗೆದುಹಾಕಿ ಸರಕಾರವು ಸಂಸ್ಕೃತಿಯ ಕೇಂದ್ರರೂಪವಾದ ಇಂತಹ ಕಲ್ಯಾಣಗಿರೀ ಪ್ರಾಚೀನ ಸಂಸ್ಥೆಗಳನ್ನು ರಕ್ಷಿಸಬೇಕು ಮತ್ತು ಜವೀನ್ದಾರೀ ಉನ್ಮೂಲನ ಮುಂತಾದ ಶಾಸನಗಳನ್ನ ಆ ಪ್ರಾಚೀನ ಸಂಸ್ಥೆಗಳ ಮೇಲೆ ಅನ್ವಯಗೊಳಿಸದೆ ಅವುಗಳ ಸ್ವತ್ವ ಸಂಪತ್ತಾದಿಗಳನ್ನು ಅಬಾಧಿತವಾಗಿರಿಗೊಡಿಸಲೂ ವ್ಯವಸ್ಥೆ ಮಾಡಬೇಕು. ಸದ್ಯದಲ್ಲಿಯೇ ಕೇಂದ್ರಧಾರಾ ಸಭೆಯಲ್ಲಿಯೂ ಒಂದು ಮಠಗಳ ಶಾಸನವು ಬರುವುದಿದೆಯೆಂದೂ ಅದು ಮೇಲೆ ಹೇಳಿದ ಶಾಸನಗಳಿಂತ ಕಡಿಮೆ ಹಾನಿಕಾರಕವಾಗಿದೆಯೆಂದೂ ಸಂಸ್ಥೆಗಳ ಹಿತರಕ್ಷಣೆಗೆ ಅನುಕೂಲವಾದೆಯೆಂದೂ ಕೇಳಿಬರುತ್ತಿದೆ. ಆದರೂ ಅದರ ಕೆಲ ಅಂಶಗಳು ಹಿತಾವಹವಾಗಿಲ್ಲವೆಂದೂ ಅನಾವಶ್ಯಕವೂ ಆಗಿವೆಯೆಂದೂ ಗೊತ್ತಾಗಿದೆ. ಆದ್ದರಿಂದ ಮತ ದೇವಾಲಯಾದಿಗಳ ಅಧಿಕಾರಿಗಳೂ ಧರ್ಮಪ್ರೇಮೀ ಪ್ರಜೆಗಳೂ ಈ ಬಿಲ್ಲಿನ ವಿಷಯದಲ್ಲಿ ಗಮನವಿತ್ತು ತಮ್ಮ ಅಭಿಪ್ರಾಯವನ್ನು ಸರಕಾರಕ್ಕೆ ಸೂಚಿಸುವರೆಂದು ನಂಬಲಾಗಿದೆ.

೧೧. ಪ್ರಜೆಗಳ ಮತ್ತು ರಾಜ್ಯದ ಕರ್ತವ್ಯ—ಹಿಂದೆ ಹೇಳಿರುವಂತೆ ಭಾರತದ ಪರಿಸ್ಥಿತಿಯು ಶೋಚನೀಯವಾಗಿದೆ, ಇದರ ಬಾಹ್ಯ ಹಾಗೂ ಆಂತರಿಕ ಪರಿಸ್ಥಿತಿಗಳು ಸಂತೋಷಜನಕವಾಗಿಲ್ಲ ದೇಶದ ನೇತೃಗಳ ಭ್ರಮಪ್ರಮಾದ ಪೂರ್ಣ ಕಾರ್ಯಗಳಲ್ಲಿ ಮತ್ತು ದೈವೀ ಪ್ರಕೋಪವೇ ಇದಕ್ಕೆ ಕಾರಣ. ಸ್ವಯಂ ಭಾರತದ ಕರ್ಣಧಾರರೇ ಒಪ್ಪಿಕೊಳ್ಳುವಂತೆ ಭಾರತವು ಅತ್ಯಂತ ವಿಕಟಪರಿಸ್ಥಿತಿಯಲ್ಲಿ ಮುಂದುವರಿಯುತ್ತಿದೆ ಅದುದರಿಂದ ಜನರು ದೇಶದ ಅಭಿವೃದ್ಧಿಗಾಗಿ ಉದ್ಯಮಶೀಲರಾಗಬೇಕು. ಸರಕಾರವೂ ಕೂಡ ಹೆಚ್ಚುತ್ತಿರುವ ವಿಘಟನೆಗಳನ್ನು ದೂರಪಡಿಸುತ್ತಾ ಹಿಂದೂಕೋಡಿನಂತಹ ಜಟಿಲಾಸ್ಪದ ಮತ್ತು ಅನಾವಶ್ಯಕವಾದ ಶಾಸನಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಲ್ಲದೆ ಪ್ರಜೆಗಳ ಅಭಿಪ್ರಾಯಾನುಸಾರವಾಗಿ ಕಾರ್ಯ ಮಾಡುತ್ತಾ ಅವರನ್ನು ಸಂತೋಷಗೊಳಿಸಬೇಕು.

೧೨ ರಾಮರಾಜ್ಯ— ಭಾರತದಲ್ಲಿ ಸಹಸ್ರಾಧಿಕ ರಾಜರುಗಳು ರಾಜ್ಯವಾಳಿ ಹೋಗಿದ್ದರೂ ಎಲ್ಲಾ ಜನರೂ ರಾಮರಾಜ್ಯವನ್ನೇ ಸ್ಮರಿಸುತ್ತಾರೆ, ಹಾಗೂ ಇಚ್ಛಿಸುತ್ತಾರೆ ರಾಮರಾಜ್ಯದಲ್ಲಿ— ' ನ ಮೇ ಸ್ತೇನೋ ಜನಪದೇ ನ ಕದರ್ಯೋ ನ ಪುದ್ಯಪಃ | ನಾನಾಹಿತಾಗ್ನಿರ್ನಾವಿದ್ವಾನ್ ನ ಸ್ವೈರೀ ಸ್ವೈರಿಣೀ ಕುತಃ || ' ಎಂಬಂತೆ ಎಲ್ಲರೂ ಸ್ವಧರ್ಮನಿಷ್ಠರೂ ಏಕಪತ್ನೀವ್ರತಸ್ಥರೂ ಪೂರ್ಣ ಆಸ್ತಿಕರೂ ಸುಖಿಗಳೂ ಆಗಿರುತ್ತಿದ್ದರು. ಎಲ್ಲಿಯೂ ಯಾವುದೇ ಬಗೆಯ ದೋಷಗಳೂ ಪಕ್ಷಪಾತಗಳೂ ದುಃಖಗಳೂ ಇದ್ದಿಲ್ಲ. ಈಗ ಭಾರತಕ್ಕೆ ಸ್ವರಾಜ್ಯವಾದರೂ ಸಿಕ್ಕಿದೆ, ಆದರೆ ಇನ್ನೂ ಸುರಾಜ್ಯ– ರಾಮರಾಜ್ಯಗಳು ದೊರೆತಿಲ್ಲ ದೇಶದ ಉಚ್ಚನೇತೃಗಳ ಅಖಿಲಾಷೆಯಾದರೋ ರಾಮರಾಜ್ಯ ಸ್ಥಾಪಿಸಬೇಕೆಂದೇ ಇದ್ದಿರು ; ಆದರೆ ಈಗ ನಡೆಯುತ್ತಿರುವ ರಾಜ್ಯಭಾರವನ್ನು ಕಾಣುವಾಗ ರಾಮರಾಜ್ಯವಿನ್ನೂ ದೂರವಿದೆಯೆಂದು ಭಾಸವಾಗುತ್ತದೆ ; ಆದ್ದರಿಂದ ಸನಾತನಧರ್ಮಾನುಯಾಯಿಗಳಾದ ಜನರೆಲ್ಲರೂ ರಾಮರಾಜ್ಯ ಸ್ಥಾಪನೆಗಾಗಿ ಸರ್ವತೋಮುಖೇನ ಪ್ರಯತ್ನ ಮಾಡಬೇಕು.

೧೩ ಸಂಘಟನೆ— ' ಸಂಘೇಶಕ್ತಿಃ ಕಲೌಯುಗೆ ' ಎಂಬ ಉಕ್ತಿಯಂತೆ ಈಗ ಸಂಘಟನೆಯು ಅತ್ಯಾವಶ್ಯಕ. ವಿಧ್ವಂಸಗಳಿಂದಲೂ ನಾಸ್ತಿಕರಿಂದಲೂ ವಿವಿಧ ಕ್ರಾಂತಿಕಾರಿಗಳಿಂದಲೂ ಸಂಘಟಿತ ರೂಪದಿಂದ ಸನಾತನಧರ್ಮದ ಮೇಲೆ ಪ್ರಹಾರ ಬೀಳುತ್ತಿದ್ದರೂ, ಸನಾತನಧರ್ಮಾನುಯಾಯಿಗಳಲ್ಲಿ ಸಂಘಟನೆಯಿಲ್ಲದಿರುವುದರಿಂದ ಧರ್ಮಪ್ರಾಣನೆನಿಸಿಕೊಂಡ ಈ ದೇಶದಲ್ಲಿಯೂ ಧರ್ಮಕ್ಕಿಂತಹ ಗಾಸಿಯೊದಗಿತು. ಸಂಘಟನಕ್ಕಾಗಿ ಎಷ್ಟೋ ಸಂಸ್ಥೆಗಳು ಸ್ಥಾಪಿತವಾಗಿ ಕಾರ್ಯ ಮಾಡುತ್ತಿದ್ದಾಗ್ಯೂ ತಕ್ಕಷ್ಟು ಸಂಘಟನೆ ಆಗಿಲ್ಲ ; ಆದರೂ ಈಗ ಅಖಿಲ ಭಾರತವ್ಯಾಪೀಯ ಧರ್ಮಸಂಘ, ಅ. ಭಾ. ರಾಮರಾಜ್ಯ ಪರಿಷತ್ತು ಮುಂತಾದುವುಗಳು ದೇಶದಲ್ಲಿ ಪ್ರಚಾರ ನಡೆಸಿ ಅಲ್ಪಸ್ವಲ್ಪ ಜಾಗೃತಿ ಹುಟ್ಟಿದೆ ; ಅದಾಗ್ಯೂ ಪೂರ್ಣ ಸಂಘಟನೆಯಾಗುವುದು ಇನ್ನೂ ಉಳಿದಿದೆ : ಆದ್ದರಿಂದ ಸಮಸ್ತ ಧರ್ಮಾನುಯಾಯಿಗಳು ಸರ್ವತ್ರ ಧರ್ಮಸಂಘ, ರಾಮರಾಜ್ಯ ಪರಿಷತ್, ಮಹಿಳಾಸಂಘ ಮುಂತಾದ ಸಂಸ್ಥೆಗಳನ್ನು ಪ್ರತಿಯೊಂದು ಗ್ರಾಮದಲ್ಲಿ ಸ್ಥಾಪಿಸಬೇಕಲ್ಲದೆ ಎಲ್ಲರೂ ಈ ಸಂಸ್ಥೆಗಳ ಸದಸ್ಯರಾಗಿ ಇವುಗಳ ವಿಶ್ವಕಲ್ಯಾಣಕಾರೀ ಶ್ರೇಷ್ಠ ಉದ್ದೇಶವನ್ನು ಸಫಲಗೊಳಿಸಲು ಪ್ರಯತ್ನಿಸಬೇಕು. ಎಲ್ಲೆಲ್ಲಿ ಈ ಸಂಘಗಳ ಕಾಖೆಗಳು ಸ್ಥಾಪಿತವಾಗಿವೆಯೋ, ಅಲ್ಲಲ್ಲಿಯ ಕಾರ್ಯಕರ್ತರ್ಯಗಳು ನಿಸ್ಸ್ವಾರ್ಥರಾಗದೆ ಜೆನ್ನಾಗಿ ಕಾರ್ಯ ನಡೆಸಬೇಕು ; ಏಕೆಂದರೆ ಕೇವಲ ಶಾಖೆ ಸ್ಥಾಪಿತವಾಗಿ, ಕಾರ್ಯವಾಹಿಯಿಲ್ಲದೆ ನಾಮಮಾತ್ರಕ್ಕಿರುವುದು ಶೋಭಾಸ್ಪದವಲ್ಲ ; ಆದ್ದರಿಂದ ಇನ್ನಾದರೂ ಎಲ್ಲಾ ಶಾಖೆಗಳ ಕಾರ್ಯಕರ್ತರ್ಯಗಳು ಪೂರ್ಣ ಕಾರ್ಯಶೀಲರಾಗಲಿ. ಉಪರ್ಯುಕ್ತ ಸಂಸ್ಥೆಗಳ ಸಂಸ್ಥಾಪಕರಾದ ಶ್ರೀ ಕರಪಾತ್ರೀ ಸ್ವಾಮಿಗಳವರು ಇತ್ತೀಚೆಗೆ ದೇಶದ ಎಲ್ಲಾ ಪ್ರಾಂತಗಳಲ್ಲಿ ಅವಿಶ್ರಾಂತವಾಗಿ ಸಂಚರಿಸಿ ಸಂಘಟನೆಯನ್ನು ಬಲಪಡಿಸುತ್ತಿರುವುದು ದೇಶದ ಶುಭೋದಯದ ಲಕ್ಷಣ. ಇದರಂತೆಯೇ ಸಮಸ್ತ ಸಾಧುಸಂತ ಮಹಾತ್ಮರೂ ಬ್ರಹ್ಮಚಾರೀಸಂನ್ಯಾಸಿಗಳೂ ನಿಃಸ್ವಾರ್ಥವೃತ್ತಿಯಿಂದ ಧರ್ಮಪ್ರಚಾರವನ್ನೂ ಸಂಘಟನ ಕಾರ್ಯವನ್ನೂ ಮಾಡಲಿ.

೧೪ ಸಂಸ್ಕೃತಭಾಷೆಯೂ ಶಿಕ್ಷಣಪದ್ಧತಿಯೂ— ಸಂಸ್ಕೃತ ಭಾಷೆಯು ಸಮಸ್ತ ಹಿಂದುಗಳ ಧರ್ಮಭಾಷೆ ಹಾಗೂ ಮೂಲ ಮಾತೃಭಾಷೆಯಾಗಿದೆ ; ಸಂಸ್ಕೃತ ಭಾಷೆಯು ಸರ್ವಾಂಗೀಣ ಉನ್ನತಿಯಾದಾಗಲೇ ಸ್ವರಾಜ್ಯದ ಪ್ರಾಪ್ತಿಯು ಯಥಾರ್ಥವಾಗುವುದಲ್ಲದೆ ಸನಾತನಧರ್ಮದ ಮೇಲೆ ಜನತೆಗೆ ಆದರ ಹುಟ್ಟುವುದು. ಆದ್ದರಿಂದ ಧರ್ಮಕ್ಕೆ ಮೂಲವಾದ ಸಂಸ್ಕೃತ ಭಾಷೆಯ ಅಭಿವೃದ್ಧಿಗಾಗಿಯೂ ಪ್ರಚಾರಕ್ಕಾಗಿಯೂ ಎಲ್ಲರೂ ಪ್ರಯತ್ನಿಸಬೇಕು. ಜರ್ಮನಿ, ಇಂಗ್ಲೆಂಡು, ಅಮೇರಿಕಾ ಮುಂತಾದ ವಿದೇಶೀಯ ವಿದ್ವಾಂಸರೂ ಸಂಸ್ಕೃತ ಭಾಷೆಯ ಮೇಲೆ ಮುಗ್ಧರಾಗಿ ಅದರ ಪ್ರಚಾರಕ್ಕಾಗಿ ಪ್ರಯತ್ನಿಸುತ್ತಾರೆ. ಕಾಬೂಲಿನಂತಹ ವಿದೇಶೀಯ ವಿದ್ಯಾಲಯಗಳಲ್ಲಿ ಸಂಸ್ಕೃತ ಶಿಕ್ಷಣೆಯನ್ನು ಅನಿವಾರ್ಯಗೊಳಿಸಲಾಗಿದೆ. ಭಾರತ ಸರ್ಕಾರವೂ ಮೊದಲಿಗಿಂತ ಹೆಚ್ಚಿಗೆ ಸಂಸ್ಕೃತ ಪ್ರಚಾರಕ್ಕೆ ಪ್ರಯತ್ನಶೀಲವಾಗಿ ಧನ್ಯವಾದ ಪಾತ್ರವಾಗುತ್ತಿದೆ ; ಆದಾಗ್ಯೂ ಸಂಸ್ಕೃತ ಶಿಕ್ಷಣ ಮತ್ತದರ ಉನ್ನತಿಗಾಗಿ ಸರಕಾರವು ಇನ್ನೂ ವಿಶೇಷ ಪ್ರಯತ್ನ ಮಾಡಬೇಕು. ಸಂಗಡಲೇ ವೇದ, ಸ್ಮೃತಿ, ಪುರಾಣ, ಧರ್ಮಶಾಸ್ತ್ರ ಮತ್ತು ದರ್ಶನಶಾಸ್ತ್ರಾದಿಗಳೂ ಅಧಿಕವಾಗಿ ಸುಪ್ರಚಾರವಾಗುವುದಕ್ಕಾಗಿ ಪ್ರಯತ್ನಿಸಬೇಕು.

ಭಾರತವು ಸ್ವತಂತ್ರವಾದರೂ ಇಲ್ಲಿಯ ಶಿಕ್ಷಾ ಪದ್ಧತಿಯು ಮೊದಲಿದ್ದಂತೆಯೇ ದಾಸ್ಯವೃತ್ತಿಯನ್ನು ಬೆಳೆಸುವಂತಹದಾಗಿ ಈಗಲೂ ನಡೆಯುತ್ತಿದೆ : ಇದು ಅತ್ಯಂತ ಶೋಚನೀಯ. ಆದ್ದರಿಂದ ಅಧುನಿಕ ಶಿಕ್ಷಾ ಪದ್ಧತಿಯನ್ನು ತೆಗೆದುಹಾಕಿ ಭಾರತಕ್ಕೆ ಅನುರೂಪವಾದ ಶಿಕ್ಷಣ ಪದ್ಧತಿಯನ್ನು ಪ್ರಚಲಿತಗೊಳಿಸುವುದಕ್ಕಾಗಿ ಎಲ್ಲರೂ ಪ್ರಯತ್ನಿಸಬೇಕು.

ಪಶ್ಚಿಮೀಯ ನೀತಿಯ ವಿಶ್ವದ ಪ್ರಮುಖ ದೇಶಗಳ ಸೆಕ್ಯುಲರೀಕರಣವನ್ನು ಪಡೆಯುವುದಕ್ಕೆ ಸಹಾಯಕವಾಗಿಲ್ಲ. ಭಾರತದ ದಕ್ಷಿಣ ದಿಕ್ಕನ್ನು ಬಿಟ್ಟು ಉಳಿದ ದಿಕ್ಕುಗಳ ಎಲ್ಲಾ ಗಡಿಗಳಲ್ಲಿ ಕಮ್ಯುನಿಷ್ಟರ ಮತ್ತಿನ್ನಿತರ ರಾಜ್ಯವು ಸಂಭಾವ್ಯವಾಗಿದೆ. ಕಾಶ್ಮೀರದ ಪ್ರಕರಣವನ್ನು ನೋಡುವಾಗ ಪಾಕಿಸ್ತಾನದ ಬಾಂಧವ್ಯವು ಹೇಗಿದೆಯೆಂಬುದೂ ಎಲ್ಲರಿಗೂ ಗೊತ್ತೇ ಇದೆ. ಒಟ್ಟಾರೆ ಸರ್ವತ್ರ ಅಶಾಂತಿಯ ಮುಗಿಲುಗಳೇ ಕವಿದುಕೊಂಡಿವೆ.

೬. ಇಂದಿನ ನೇತೃಗಳು— ದೇಶದ ಈಗಿನ ಕರ್ಣಧಾರರು ಪಾಶ್ಚಿಮಾತ್ಯ ವಿದ್ಯಾ ಸಂಸ್ಕೃತಿಯಿಂದ ವಿಭೂಷಿತರೂ ಸೌವರ್ಣಾಕ್ಷರ ಸಂಸ್ಕೃತಿ—ಧರ್ಮಗಳಲ್ಲಿ ಸರ್ವಥಾ ಅನಭಿಜ್ಞರೂ ಆಗಿರುವುದು ಮಾತ್ರವೇ ಅಲ್ಲದೆ ಭಾರತೀಯ ಪಾರಂಪರೀಣ ಪರಂಪರೆಯ ನಿಂದಕರೂ ಭಾರತವನ್ನು ಸರ್ವಪ್ರಕಾರದಿಂದ ಪಶ್ಚಿಮ ದೇಶದಂತೆಯೇ ಮಾಡಿಬಿಡಲು ಸಿದ್ಧರೂ ಆಗಿರುವರು. ಆದರಿಂದಲೇ ಅವರು ಭಾರತದ ಅಧ್ಯಾತ್ಮಪ್ರಧಾನವಾದ ಈಶ್ವರೀಯ ನಿಯಮ ನಿಬಂಧಗಳನ್ನು ವಂಚಿಸಿಕ್ಕಿ ಹೊಸ ಶಾಸನಗಳನ್ನು ತಂದು ಮಂಡಿಸುತ್ತಿರುವರು. ದೇಶದ ವಿಪತ್ತಿನ ಯಥಾರ್ಥ ಕಾರಣವನ್ನು ಗೊತ್ತು ಹಚ್ಚಿ ಅದಕ್ಕೆ ತಕ್ಕ ಪ್ರತೀಕಾರವನ್ನು ಮಾಡುವ ಬದಲಿಗೆ ಇವರು ತಮ್ಮ ಸ್ವಬದ್ಧತೆ ತೋರಿದಂತೆ, ಪ್ರಜೆಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ಕಾರ್ಯ ಮಾಡುತ್ತಿರುವರು. ಈ ರೀತಿ ಒಪ್ಪು ಸಂಖ್ಯಾತ ಪ್ರಜೆಗಳಿಗೆ ವಿರುದ್ಧವಾಗಿ ಈ ಅಂಗುಲೇಮೇಯರಾದ ನೇತೃಗಳು ವರ್ತಿಸುತ್ತಿರುವುದು ನಿಶ್ಚಯ ವಿಶ್ವತ ಇದಿಹಾಸದಲ್ಲಿಯೇ ಅತ್ಯಂತ ಆಶ್ಚರ್ಯದ ವಿಷಯವಾದರೂ ಇದನ್ನು ನರು ಪ್ರಜಾತಂತ್ರವೆಂದೇ ಘೋಷಿಸುತ್ತಿದ್ದಾರೆ!

೭. ಧರ್ಮಹೀನರಾಜ್ಯ— ಅನಾದಿಕಾಲದಿಂದ ಧರ್ಮಪ್ರಧಾನದೇಶವೆಂದು ಪ್ರಸಿದ್ಧವಿತ್ತು ಈ ಭಾರತಕ್ಕೆ ಸೆಕ್ಯುಲರ್ ಅರ್ಥಾತ್ ಧರ್ಮನಿರಪೇಕ್ಷ ರಾಜ್ಯವೆಂದು ಘೋಷಿತವಾಗಿದೆ. ಸೆಕ್ಯುಲರ್ ಶಬ್ದಕ್ಕೆ ಹಲವು ಅರ್ಥಗಳಿದ್ದಾಗ್ಯೂ ಯಾವುದೇ ಅರ್ಥದಿಂದ ನೋಡಿದರೂ ನಾಸ್ತಿಕರಾಜ್ಯವೆಂದೇನೋ ಸಿದ್ಧವಾಗಿಯೇ ಇಗುತ್ತವೆ ನಾಸ್ತಿಕರಾಜ್ಯದಲ್ಲಿ ನಿಶ್ಚಯವಾಗಿಯೂ ಸುಖ ಶಾಂತಿಯು ಇಲಾರದು. ಏಕೆಂದರೆ 'ಯಥಾ ರಾಜಾ ತಥಾ ಪ್ರಜಾ' ಎಂಬ ನ್ಯಾಯದಂತೆ ಅಲ್ಲಿಯ ಜನತೆಯೂ ನಾಸ್ತಿಕವಾಗುವುದು ಎಲ್ಲಿ ಪ್ರಜೆಗಳೆಲ್ಲರೂ ನಾಸ್ತಿಕರಾಗುವರೊ ಅಲ್ಲಿ ಉಚ್ಛೃಂಖಲತೆಯೂ ಬಹುನಾಯಕತೆಯೂ ಹೆಚ್ಚುವುದು ಅದರಿಂದ ದೇಶದಲ್ಲಿ ದುಷ್ಕರ್ಮಗಳೂ ಅಪರಾಧಗಳೂ ಅಧಿಕವಾಗುವುವು. ಭಾರತದಲ್ಲಿಯೂ ಮೊದಲಿಗಿಂತ ಅಪರಾಧಗಳು ಹೆಚ್ಚಿವೆಯೆಂದು ಸರ್ಕಾರದ ಪಬ್ಲಿಸಿಟಿಯಿಂದಲೇ ಸಿದ್ಧವಾಗುತ್ತದೆ. ಎಲ್ಲಿ ಈಶ್ವರನ ಮೇಲೂ ಪರಲೋಕದ ಮೇಲೂ ಶ್ರದ್ಧಾಭಯಗಳು ಕಡಿವೆ ಆಗುವುವೋ ಅಲ್ಲಿ ಅಪರಾಧದ ಮನೋವೃತ್ತಿಯು ಹೆಚ್ಚಿಯೇ ಹೆಚ್ಚುವುದು. ಅಲ್ಲದೆ ಭಾರತವೆಂದೂ ಭೌತಿಕಪ್ರಧಾನ ಧರ್ಮಹೀನ ದೇಶವಾಗಿರಲೇ ಇಲ್ಲ ವಿಶ್ವದಲ್ಲೆಲ್ಲ ಐದೆರಡು ರಾಜ್ಯದ ಹೊರತು ಉಳಿದ ಯಾವ ರಾಜ್ಯವೂ ಧರ್ಮರಹಿತವಾಗಿಲ್ಲ. ಭಾರತದಲ್ಲಾದರೋ ನೂಂಕ್ಕೆ ೯೯ ಜನರು ಈಗಲೂ ನಿಶ್ಚಯವಾಗಿ ಆಸ್ತಿಕರೇ ಇರುವರು. ಹೀಗಿರುವಾಗ ರಾಜವು ನಾಸ್ತಿಕವಾಗಿ ಹೇಗಿರಬಲ್ಲದು? ಮತ್ತು ಇದನ್ನು ಪ್ರಜಾನಮ್ಮತಿಪೂರ್ಣ ರಾಜ್ಯವೆಂದು ಹೇಗೆ ಹೇಳಬಹುದು? ಒಂದೇಒಂದು ಪಕ್ಷದ ಕೆಲವೇ ನೇತೃಗಳು ತಮ್ಮ ಸ್ವಕೀಯ ದುರಭಿಪ್ರಾಯದಿಂದ ಸಮಸ್ತ ರಾಜ್ಯದ ಸ್ವರೂಪವನ್ನು ಧರ್ಮರಹಿತವನ್ನಾಗಿ ಮಾಡಿದರೆ ಅದೆಂದಾದರೂ ನ್ಯಾಯಸಂಗತವಾದೀತೆ? ಶಾಸ್ತ್ರೈಕ್ಯವಾಕ್ಯತೆ ಧರ್ಮ ಈಶ್ವರಾದಿ ಶೂನ್ಯವಾದ ನಾಸ್ತಿಕ ರಾಜ್ಯದ ಮೇಲೆ ದೈವೀಕೃಪೆಯು ಹೇಗೆ ಪ್ರಾಪ್ತವಾದೀತು? ಇದೇ ಕಾರಣದಿಂದ ದೇಶದಲ್ಲೀಗ ದೈವೀ ಕೋಪರೂಪವಾದ 'ಅತಿವೃಷ್ಟಿರನಾವೃಷ್ಟಿರ್ಮೂಷಕಾಃ ಶಲಭಾಃ ಶುಕಾಃ | ಅತ್ಯಾಪನ್ನಾಶ್ಚ ರಾಜಾನಃ ಷಡೇತೆ ಈತಯಃ ಸ್ಮೃತಾಃ' ಎಂಬ ಆರು ಈತಿಬಾಧೆಗಳು ದಿನದಿನಕ್ಕೆ ಹೆಡ್ಡುತ್ತವೆ. ಆದ್ದರಿಂದ ಇನ್ನಾದರೂ ಭಾರತದ ನೇತೃಗಳು ಚೆನ್ನಾಗಿ ವಿಚಾರಮಾಡಿ ಭಾರತ ರಾಜ್ಯವನ್ನು ಧರ್ಮಸಿಯಂತ್ರಿತ ರಾಜ್ಯ ಅರ್ಥಾತ್ ರಾಮರಾಜ್ಯವಾಗಿ ಸೂರ್ಪಡಿಸಿದರೆ ಅದರಿಂದ ಒಳಿತಾದೀತು.

೮ ಹಿಂದೂಕೋಡು ಬಿಲ್ಲು— ಹೇಳಲಿಕ್ಕೇನೋ ಭಾರತವು ಧರ್ಮನಿರಪೇಕ್ಷವಾದುದೆಂದೂ ಎಲ್ಲಾ ಧರ್ಮಾವಲಂಬಿಗಳಿಗೂ ಅವರವರ ಧರ್ಮ ಮತ್ತು ಉಪಾಸನೆ ಮಾಡಲು ಪೂರ್ಣ ಸ್ವಾತಂತ್ರ್ಯವಿದೆಯೆಂದೂ ರಾಜಕಾರಣಿಗಳು ಹೇಳುತ್ತಿದೆ; ಆದರೆ ಕೇವಲ ಹಿಂದೂಧರ್ಮ ಮತ್ತದರ ಸಾಮಾಜಿಕ ವಿಷಯಗಳ ಮೇಲೆಯೇ ಕ್ರಾಂತಿಕಾರೀ ಕಾನೂನುಗಳ ಮೂಲಕ ಭಯಂಕರವಾದ ಹಸ್ತಕ್ಷೇಪ ಮಾಡುತ್ತಿರುವುದು ಅತ್ಯಂತ ಶೋಚನೀಯ. ಧರ್ಮನಿರಪೇಕ್ಷ ಸರಕಾರವು ಎಲ್ಲಾ ಧರ್ಮಗಳ ವಿಷಯದಲ್ಲಿ ತಟಸ್ಥವಾಗಿರಬೇಕೇ ಹೊರತು ಯಾವುದೇ ಒಂದು ಧರ್ಮದ ವಿಷಯದಲ್ಲಿ ತದ್ವಿರೋಧೀಯ ಪ್ರಜೆಗಳ ತೀವ್ರ ವಿರೋಧ ವಿದ್ದಾಗ್ಯೂ ಸುಧಾರಣೆಗಳ ನೆಪದಿಂದ ಅನುಚಿತ ಪ್ರಹಾರಗಯ್ಯುವುದು ಉಚಿತವೆನಿಸದು. ಹೀಗೆ ಮಾಡಿದಲ್ಲಿ ಅನ್ಯ ಧರ್ಮಾವಲಂಬಿಗಳಿಗೆ ಸೆಕ್ಯುಲರವು ಎಂದಾದರೊಮ್ಮೆ ತಮ್ಮ ಧರ್ಮದ ಮೇಲೂ ಪ್ರಹಾರ ಮಾಡಬಹುದೆಂದು ಅವಿಶ್ವಾಸ ಹುಟ್ಟುವುದು ಸ್ವಾಭಾವಿಕವಾದುದು. ಈ ರೀತಿ ಸಮಸ್ತ ಪ್ರಜೆಗಳ ನಂಬುಗೆಯನ್ನು ಕಳೆದುಕೊಳ್ಳುವುದು ಎಷ್ಟರವರೆಗೆ ಶ್ರೇಯಸ್ಕರವಾದೀತು?

ಇದರಂತೆಯೇ ಸರ್ವ ಪ್ರಜೆಗಳ ಪೂರ್ಣ ವಿರೋಧವಿದ್ದಾಗ್ಯೂ ಜನತಂತ್ರ ಭಾರತದಲ್ಲಿ ಧರ್ಮಸಂಸ್ಕೃತಿಗಳನ್ನು ಉಚ್ಛೇದಿಸುವ ಹಿಂದೂಕೋಡು ಬಿಲ್ಲನ್ನು ಶರಲು ಸರಕಾರದ ಮೂಲಕ ಪ್ರಯತ್ನ ನಡೆಯುತ್ತಿರುವುದು ಅತ್ಯಂತ ಖೇದಕರ. ಧರ್ಮದಲ್ಲಿ ಬುಡಸಹಿತ ಮಾರ್ಪಾಡು ಮಾಡುವ ಇಂತಹ ಕಾನೂನನ್ನು, ಸರ್ವ ಸ್ಮೃತಿ ಧರ್ಮಾಚಾರ್ಯರ ಮತ್ತು ಧರ್ಮಭಿಜ್ಞರಾದ ವಿದ್ವಾಂಸರ ಅಭಿಪ್ರಾಯ ತೆಗೆದುಕೊಳ್ಳದೆ ಧರ್ಮ ವಿಷಯದಲ್ಲಿ ತೀರ ಅನಭಿಜ್ಞರೂ ಅನಧಿಕಾರಿಗಳೂ ಆದ ಶಾಸನ ಸಭಾ ಸದಸ್ಯರ ಸಮರ್ಥನೆಯ ಬಲದಿಂದ, ಇಂತಹ ಕಾನೂನನ್ನು ಚರ್ಚಿಸಲು ಅನಧಿಕೃತವಾದ ಶಾಸನ ಸಭೆಯಲ್ಲಿ ತಂದಿರುವುದು ಸರ್ವಥಾ ನಿಂದನೀಯವಾದುದು. ಕೆಲ ನೇತೃಗಳಂತೂ ಹಿಂದೂಕೋಡ್ ಬಿಲ್ಲಿನ ವಿರೋಧಿಗಳಿಗೆ ಅನೇಕ ಪ್ರಕಾರದ ಭರ್ತ್ಸನೆ ಮಾಡುತ್ತಿರುವರಲ್ಲದೆ ಭಯವನ್ನೂ ತೋರಿಸುತ್ತಿರುವುದು ಅತೀವ ದುಃಖಕರ ಧರ್ಮನಿರಪೇಕ್ಷ ರಾಜ್ಯವು ಈ ರೀತಿ ಕೇವಲ ಹಿಂದೂಜನರ ಧಾರ್ಮಿಕ ಸಾಮಾಜಿಕ ಜೀವನದಲ್ಲಿ ಕೈಹಾಕುವುದು ಸರ್ವಥಾ ಅಸಹ್ಯವಾದುದು. ದೇಹ್ಯದ ಬಾಹ್ಯಾಭ್ಯಂತರ ಪರಿಸ್ಥಿತಿಗಳು ಅತ್ಯಂತ ಕೆಟ್ಟು ಹೋಗಿರುವುದರಿಂದ ಹೇಗಾದರೂ ಪ್ರಜೆಗಳನ್ನು ಸಂತೋಷಗೊಳಿಸುವುದು ಬಹಳ ಆವಶ್ಯಕವಾಗಿರುವಾಗ ಇಂತಹ ವಿವಾದಾಸ್ಪದ ಕಾನೂನುಗಳಿಂದ ಜನತೆಯಲ್ಲಿ ಇನ್ನಷ್ಟು ಅಸಂತೃಪ್ತಿಯನ್ನು ಬೆಳೆಸಿದರೆ ದೇಶಕ್ಕೆ ದಾವ ಲಾಭವಾದೀತು? ಅದ್ದರಿಂದ ಈಗಲಾದರೂ ನೇತೃಗಳು ತಮ್ಮ ಹಠಾಗ್ರಹವನ್ನು ತ್ಯಜಿಸಿ ಇಂತಹ ಹಾನಿಕಾರಕವಾದ ಹಿಂದೂಕೋಡು ಬಿಲ್ಲನ್ನು ಬೇಗ ತೆಗೆದುಹಾಕಿ ದೇಶದಲ್ಲಿ ಸಂತೃಪ್ತಿಯನ್ನು ಬಲಪಡಿಸಲಿ; ಜತೆಗೇ ಸನಾತನಧರ್ಮಿಗಳೂ ಕೂಡ ಇನ್ನೂ ಹೆಚ್ಚು ಒಂದುಗೂಡಿ ಈ ಹಿಂದೂಕೋಡನ್ನು ತೆಗೆದುಹಾಕಿಸಲು ಪ್ರಯತ್ನಿಸಬೇಕಾದುದು ಕರ್ತವ್ಯ.

೯ ಗೋರಕ್ಷಣೆ— ನಮ್ಮ ಭಾರತದಲ್ಲಿ ಗೋಮಾತೆಯು ಧಾರ್ಮಿಕ, ಆಧ್ಯಾತ್ಮಿಕ, ಆರ್ಥಿಕ ಇತ್ಯಾದಿ ಎಲ್ಲಾ ದೃಷ್ಟಿಗಳಿಂದ ಆದರಣೀಯಳು; ಅದರಿಂದಾಗಬೇಕಾದಷ್ಟು ಪ್ರಮಾಣದಲ್ಲಿ ಗೋರಕ್ಷಣೆ ನಡೆಯುತ್ತಿಲ್ಲ; ಅಲ್ಲದೆ ಸಂಕಾರದ ಆಶ್ರಯದಲ್ಲಿ ಎಷ್ಟೋ ವಧಶಾಲೆಗಳಲ್ಲಿಯೂ ಅನ್ಯ ವಿಧರ್ಮಿಗಳಲ್ಲಿಯೂ ಅಧಿಕ ಸಂಖ್ಯೆಯಲ್ಲಿ ಗೋಹತ್ಯೆಯಾಗುತ್ತಿದೆ ಇದೇ ದೇಶದ ಸರ್ವವಿಧ ಅನರ್ಥಗಳಿಗೆ ಮೂಲವಾಗಿದೆ. ಧರ್ಮಸಂಘ ಮತ್ತು ರಾಮರಾಜ್ಯ ಪರಿಷತ್ತು ಮುಂತಾದುವುಗಳ ಮೂಲಕ ಗೋಹತ್ಯಾ ನಿರೋಧಕ್ಕಾಗಿ ಬಹ ವಿಧದಿಂದ ಪ್ರಯತ್ನ ನಡೆಯುತ್ತಿದೆಯಲ್ಲದೆ ಈಗಲೂ ಗೋವಧ ಮತ್ತು ಹಿಂದೂಕೋಡುಗಳ ವಿರೋಧಾರ್ಥ ಡೆಲ್ಲಿಯಲ್ಲಿ ವರ್ಷಗಳಿಂದ ಸತ್ಯಾಗ್ರಹ ನಡೆಯುತ್ತಿದೆ; ಇನ್ನೂ ಎಷ್ಟೋ ಅನ್ಯ ಸಂಸ್ಥೆಗಳ ಹಾಗೂ ಅನೇಕ ಸಜ್ಜನರ ಕಡೆಯಿಂದ ಗೋವಧನಿರೋಧಕ್ಕಾಗಿ ಚಳವಳಿಗಳು ನಡೆಯುತ್ತಿವೆ ಒರ್ವಾ, ಪಾಕಿಸ್ತಾನ, ಅಫಘಾನಿಸ್ತಾನಗಳಂತಹ ದೇಶಗಳಲ್ಲಿಯೇ ಗೋಹತ್ಯೆಯು ತಡೆಯಲ್ಪಟ್ಟಿದ್ದರೂ ಅಹಿಂಸೆಯೇ ಧ್ಯೇಯವಾಗಿ ಉಳ್ಳ ಭಾರತದೇಶದಲ್ಲಿ ಗೋವಧೆಯು ನಿಂತಿಂದಿರುವುದು ಅದೆಷ್ಟು ಖೇದವಾದ ವಿಷಯ! ಅಹಮ್ಮದಾಬಾದಾದಿನಗರಗಳಲ್ಲಿ ಕೆಲಧರ್ಮಪ್ರೇಮೀ ಸಜ್ಜನರು ಗೋವಧ ನಿರೋಧಕ್ಕಾಗಿ ಹಲವು ದಿನಗಳವರೆಗೆ ಉಪವಾಸಗಳನ್ನೂ ಮಾಡಿದರು. ಆದರೂ ಅಲ್ಲಿಯ ಮ್ಯುನಿಸಿಪಾಲಿಟಿಯಾಗಲಿ ಸರಕಾರವಾಗಲಿ ಸ್ವಲ್ಪವೂ ಗಮನಕೊಡಲಿಲ್ಲ. ಇದು ಅಹಿಂಸಕ ರಾಜ್ಯಕ್ಕೆ ಭೂಷಣವೆ? ಅದೂ ಸೌರಾಷ್ಟ್ರದಲ್ಲಿ ಗೋವಧೆ ನಿಂತಿರುವುದು ಸ್ವಲ್ಪ ಸಂತೋಷದ ವಿಷಯ. ಆದ್ದರಿಂದ ಇನ್ನಾದರೂ ಭಾರತ ಸರಕಾರವು ದೇಶದ ದೊಡ್ಡ ದೊಡ್ಡ ನೇತೃ